
# ಅಖಿಲ ಭಾರತ ಪತ್ರಿಕೆ

## ಅಕ್ಟೋಬರ್ 2022



# ಸಾತ್ವಿಕ ಜೀವನದ ಸೂತ್ರ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

“ಯೌಗಿಕ ಭಾಷಾಸ್ವರೂಪ”

**ಅಖಿಲ ಭಾರತ ಪತ್ರಿಕೆ**
**ಅಕ್ಟೋಬರ್ 2022**

ಸಂಪುಟ: 32 ಸಂಚಿಕೆ: 10

## ಪರಿವಿಡಿ

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## "ಸಾತ್ವಿಕ ಜೀವನದ ಸೂತ್ರ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಸಾತ್ವಿಕ ಜೀವನದ ಪಥದಲ್ಲಿ...** 2
– ಶ್ರೀ ಪುಟ್ಟು ಕುಲಕರ್ಣಿ

**ಸಾಕ್ಷಾತ್ಕಾರಕ್ಕೆ ದ್ವಾರ (ಪ್ರವೇಶ)** 8
**ಜೀವನ–ಪಥದಲ್ಲಿ ನಿರಂತರದ ಜ್ಯೋತಿ** 13
**ಆಂತರಿಕ ಸಾನಿಧ್ಯದ ಅರಿವುಳ್ಳವರಾಗಿ** 16
ಅನು: ಡಾ॥ ಮಹಾದೇವ ಸಕ್ರಿ

**ಆಧ್ಯಾತ್ಮಿಕ ಮತ್ತು ಚೈತ್ಯಾತ್ಮದ ಮಾತೃಸ್ವರೂಪ** 20
**ನಿಜವಾದ ಮಗುವಾಗಿರಿ** 21
**ಗೊಂದಲದಲ್ಲಿರುವ ಸಾಧಕನಿಗೆ ಶ್ರೀಮಾತೆಯವರ ಮಾಗದರ್ಶನ** 22
**ಮಗುವಿನಂತಹ ಮನಸ್ಸು** 23
**ಮಗುವಿನಂತಹ ನಂಬಿಕೆ** 23
ಅನು: ನಾಗಜ್ಯೋತಿ ಮಾನವಿ

**ದೇವರು, ಬೆಳಕು, ಸ್ವಾತಂತ್ರ್ಯ, ಅಮರತ್ವ** 24
**ಜೀವನದ ದೈವೀಕರಣ** 26
**ದೇವರೆಡೆಗೆ ಆರೋಹಣ: 3 ವಿಧಾನಗಳು** 27
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀ ಅರವಿಂದರ 'ತಾಂತ್ರಿಕಸಿದ್ಧಿ ಪ್ರಕರಣಂ'** 31
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಅಭಿವ್ಯಕ್ತಿಯ "ಯೌಗಿಕ ಭಾಷಾಸ್ವರೂಪ"** 36
– ಶ್ರೀ ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 43

## ಸಾತ್ವಿಕ ಜೀವನದ ಪಥದಲ್ಲಿ...

– ಪುಟ್ಟು ಕುಲಕರ್ಣಿ

"ನಮ್ಮ ಜೀವನವು ಆ ದಿವ್ಯ ಪರಮ ಪಾರಮ್ಯಕಾಗಿ ಯಜ್ಞ"
(ಸಾವಿತ್ರಿ; ದಳ 2 ರೇಣು 1)

### ಶ್ರೀ ಅರವಿಂದರ ಸಾವಿತ್ರಿ

ಓ ಶುಭ್ರ–ತೇಜ ಸೌಂದರ್ಯ ಸತ್ಯ ಸಾವಿತ್ರಿ ರಾಜಪುತ್ರಿ,
ನಿನ್ನಾತ್ಮ ಮುದದ ಜೊತೆ ಎನ್ನ ಹ್ಲಾದ ಬಲಗಳಲಿ ಯೋಗ ಖಾತ್ರಿ,
ಇದು ನಿನ್ನ ಕೋಶ ಜೊತೆ ಪುಣ್ಯತೀರ್ಥ ಬಾ ಎನ್ನ ಉಸಿರಿಗೀಗ
ಶಕ್ತಿಗಳು ಮೇಳ–ಸಮ್ಮೇಳಗೊಳುವ ಮಹತಿಯಾ ತಾಣಕೀಗ,

ನಿರ್ಮಾಯ ಘನದ ಮೌನದಲಿ ಸರ್ವ ಬೇಡಿಕೆಯನಿಟ್ಟುಕೊಂಡು
ಮತ್ತಿದೋ ನನ್ನ ಆಭೀಪ್ಸೆಯೀಗ ಮುಂಚೂಣಿಯಲ್ಲಿ ಇಂದು
ನನ್ನದೇ ದಟ್ಟ ವೃಕ್ಷಗಳ ವಲಯದಲ್ಲೀಗ ಸಾಗಿಕೊಂಡು
ನೀನಲ್ಲಿ ಸೂಕ್ಷ್ಮಸೂಕ್ಷ್ಮಾತಿ ವೃತ್ತಖಂಡದಲಿ ಬಾಗಿಕೊಂಡು;

ವಸ್ತು–ವಿಷಯಗಳ ಜೀವದುಸಿರಿನಲಿ ಒಂದಾಗಿ ಚಿರದ ಜೀವ,
ನಿನ್ನದೆಯ ಮಿಡಿತಗಳ ನಾದವೀಗ ಅದು ನನಗೆ ಬಹಳ ಸನಿಹ
ಸತತದಲಿ ಇಲ್ಲಿ ಮಿಡಿತಗೊಳ್ಳುವೆಡೆ ತುಡಿಯುತ್ತಲಿರುವ ಭಾವ
ಪುಷ್ಪಗಳ ಮಧುರ–ಪರಿಮಳವು ಉಲಿತದಲ್ಲೀಗ ನಾದ–ಜೀವ

ಆ ಸರ್ವ–ಮಧುರ ಮರ್ಮರದ ನಿನದ ಮರುಕಳಿಸಿ ಈಗ ಇಲ್ಲಿ
ಪ್ರತಿ ಪಕ್ಷಿಯೀಗ ಸ್ಮರಿಸುತಿದೆ ಇದನು ತನ್ನೆದೆಯ ಕ್ರಂದದಲ್ಲಿ

– ಪುಟ್ಟು ಕುಲಕರ್ಣಿ
(ದಳ 5 ರೇಣು 3 ಪುಟ 409)

––––––

ಶ್ರೀ ಅರವಿಂದರ "ಸಾವಿತ್ರೀ" ಅಭಿವ್ಯಕ್ತಿಗಳಲ್ಲಿ, ಅದರಲ್ಲೂ 'ಸಾವಿತ್ರೀ' ಮಹಾಕಾವ್ಯದಲ್ಲಿ ಚಿತ್ರಿತಗೊಂಡಿರುವ, ಮಾನವನ ಬದುಕು ಕೇವಲ ತಮದಿಂದ ಬಂದು ತಮದಲ್ಲಿಯೇ ಬದುಕಿ ಮರೆಯಾಗುವ ಜಂಜಡದ ವಿಧಾನವಲ್ಲ; ಅದು ಪೂರ್ಣತ್ವವನ್ನು

ಪಡೆಯುವದರ ಸಲುವಾಗಿ, ಅವತರಣಗೊಂಡು, ತಮ ಸಪ್ತಮದ ಬದುಕಿನಿಂದ ಜ್ಞಾನ ಸಪ್ತಮದ ಮೂಲಕ ಪರಿಪೂರ್ಣತೆಯನ್ನು ಪಡೆಯುವ ಸಲುವಾಗಿ ವಿಕಸನಗೊಳ್ಳುತ್ತಿರುವ ವಿಧಾನವಾಗಿದೆ. ಪರಿಶುಭ್ರ ಬೆಳಕಿಗೆ ಆಯಾಮವಿರುವದಿಲ್ಲ; ಆದರೆ ಆಯಾಮದ ಹಂತವಿಲ್ಲದೇ ಪರಿಪೂರ್ಣತೆ ಸಾಧ್ಯವಿಲ್ಲ. ಹೀಗಾಗಿ, ಆಯಾಮವನ್ನು ಪಡೆದುಕೊಳ್ಳುವದರ ಸಲುವಾಗಿ ಈ ಪರಮ ಪಾರಮ್ಯವು ಸೂಕ್ಷ್ಮ ರೂಪದಲ್ಲಿ – ಅಂಶಾತ್ಮಕವಾಗಿ – ಮಾನವನ ದೇಹದಲ್ಲಿ ಅವತರಿಸುತ್ತದೆ.

ಇದು ಹೃದಯದಲ್ಲಿ, ಆತ್ಮಜ್ಯೋತಿಯಾಗಿ ಸೂಕ್ಷ್ಮಾತಿಸೂಕ್ಷ್ಮ ರೂಪದಲ್ಲಿರುವ ಈ ಬ್ರಹ್ಮ ಚೈತನ್ಯವು (ಋತವು) ತನ್ನದೇ ಮೂಲವನ್ನು ಮತ್ತೆ ಪಡೆಯುವ ಸಲುವಾಗಿ ಸದಾ ತುಡಿಯುತ್ತಿರುತ್ತದೆ. ಆದರೆ ಭೂ–ಬದುಕ ಕವಚದೊಳಗೆ ಸಿಲುಕಿದ ಈ ಸೂಕ್ಷ್ಮಾಂಶವು ತನ್ನ ಮೂಲ ನೆಲೆಯನ್ನು ಮರೆತು, ಲೌಕಿಕ ಆಕರ್ಷಣೆಗೆ ಸಿಲುಕಿ ಸದಾ ವಿಭ್ರಮೆಯಲ್ಲಿಯೇ ಇರುತ್ತದೆ. ಹಗಲು–ರಾತ್ರಿಗಳ, ಬೆಳಕು–ಕತ್ತಲೆಯ ವಿನ್ಯಾಸದ ಹಿಂದಿರುವ ವಿಕಸನದ ಅಲೆಯ ಚಲನೆಯನ್ನು ಅರಿಯದೇ, ಜಂಜಡದ ಸ್ಥಿತಿಯಲ್ಲಿ ತೇಲುತ್ತಿರುತ್ತದೆ.

ಈ ಸ್ಥಿತಿಯಿಂದ ಮಾನವನ ಆತ್ಮವನ್ನು ಮತ್ತೆ ನಿಗದಿತವಾಗಿರುವ ಶಾಶ್ವತದ ಸತ್ಯದ ನೆಲೆಗೆ ತೆಗೆದುಕೊಂಡು ಹೋಗುವ ಹೊಣೆಗಾರಿಕೆಯೂ ಸಹಿತ ಈ "ಪರಮಪಾರಮ್ಯ"ದ್ದೇ ಆಗಿರುತ್ತದೆ. ಈ ಭೂ ಬದುಕಿನ ಸ್ಥಿತಿಯಲ್ಲಿ ರೂಪುಗೊಳ್ಳುವ ಆಯಾಮಗಳು, ಸೂಕ್ಷ್ಮ ರೂಪದ ಆತ್ಮಜ್ಯೋತಿಯ ಜೊತೆಗೆ ಮೂಲದಲ್ಲಿ ಸಂಲಗ್ನಗೊಳ್ಳುವ ಮೂಲಕ ಪರಿಪೂರ್ಣತೆಯನ್ನು ಪಡೆಯಲು ಸಹಕರಿಸುತ್ತವೆ. ಇದು ವಿಶ್ವ ನಿಯಮ. ಆದರೆ ಮಾನವ ಕುಲವು ಈ ಕ್ರಿಯೆಯ ಹಂತದ ವಿವರಗಳನ್ನರಿಯದೇ, "Holocaust" ಹೋಲೋಕಾಸ್ಟ್ ಎನ್ನುವದನ್ನು ಪ್ರಳಯ–ಲಯ–ವೈಪರೀತ್ಯ ಎನ್ನುವ ರೀತಿಯಲ್ಲಿ ಪರಿಗಣಿಸಿ, ಮತ್ತೂ ಮತ್ತೂ ಗೊಂದಲದಲ್ಲಿಯೇ ಬದುಕು ಮುಂದುವರೆಸುತ್ತದೆ. ಹೋಮವಾಗಲಿ, ಯಾಗವಾಗಲಿ ಅಥವಾ ಯಜ್ಞವಾಗಲಿ, ಇವೆಲ್ಲ ಮಾನವನ ಬಯಕೆಗಳ ಈಡೇರಿಕೆಯ ಸಲುವಾಗಿ, ದೈವೀ ಶಕ್ತಿಗಳಿಗೆ ಅರ್ಪಿಸುವ ವಿಧಿ–ವಿಧಾನಗಳಂತೆ ರೂಪಿತಗೊಂಡ ಘಟನೆಗಳಾಗಿವೆ. ಒಂದು ವೇಳೆ ಈ ರೀತಿಯ ಘಟನೆಗಳು ಭೂ–ಬದುಕಿಗೇ ಅಂಟಿಕೊಂಡಿರುವ ಸಲುವಾಗಿಯೇ ನಡೆಸಲ್ಪಡುತ್ತಿದ್ದಲ್ಲಿ ,ಅದು ಪರಿಪೂರ್ಣತೆಯ ಹಂತದೆಡೆಯ ಪಯಣವನ್ನು ಖಂಡಿತವಾಗಿಯೂ ವಿಚಲನೆಗೊಳಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಸದಾ ಸುಖದ ಆನಂದದ ಬದುಕು ನಮಗಿರಲಿ ಎಂದು

ಬೇಡಿಕೆ ಇಟ್ಟು, ಅದರ ಪೂರೈಕೆಗಾಗಿ ಕೊಡು–ಕೊಳುವ ವ್ಯವಹಾರಾತ್ಮಕವಾದ ರೀತಿಯಲ್ಲಿ ಇರುತ್ತದೆ. ಹೀಗಾಗಿ ಇಂಗ್ಲೀಷಿನ ಈ ಹೋಲೋಕಾಸ್ಟ್ ಎನ್ನುವದು ಬಲಿ–ಪ್ರಳಯ ಎನ್ನುವ ವಿಘಟನಾತ್ಮಕ ಧೋರಣೆಯಲ್ಲಿಯೇ, ವಿಘಾತಕಾರೀ ಅಂಶಗಳಲ್ಲಿಯೇ ಪ್ರತಿಪಾದಿಸಿಕೊಂಡು ಬರಲಾಗಿತ್ತು.

ಆದರೆ ಯಜ್ಞವು ಇದಕ್ಕೆ ಸಂಪೂರ್ಣ ವಿಭಿನ್ನ ನೆಲೆಯಲ್ಲಿಯೇ ಇರುತ್ತದೆ. ಯಜ್ಞವು ನೈಸರ್ಗಿಕ ವಿಕಸನಕ್ಕೆ ಬ್ರಹ್ಮಾಂಡವು ಸ್ವಯಂ ನಿರೂಪಿಸಿಕೊಂಡಿರುವ ನಿಯತಿಯಾಗಿದೆ. ನಿರಾಕಾರವಾಗಿರುವ ಅನಂತವು ಅವಕಾಶದಲ್ಲಿ ಆಕಾರಗೊಂಡು ಅವಕಾಶದಲ್ಲಿಯೇ ಪ್ರಕಟಗೊಳ್ಳುವ ಪ್ರಕ್ರಿಯೆಯಾಗಿ ಯಜ್ಞವು ರೂಪುಗೊಳ್ಳುತ್ತದೆ. ಇದು ವಿಕಸನದ ಅಲೆ; ಬ್ರಹ್ಮ–ಬ್ರಹ್ಮಾಂಡದ ರಚನೆಗಾಗಿ ಆಗಮಿಸಲಿರುವ ಕಿರಣ; ಇದೇ ಋತವೂ ಹೌದು. ಖೇಖಮಧ್ಯದಲ್ಲಿ (ಕಾಸ್ಮೋಕಾಸ್ಮಿಕ ಝೆನಿಥ್) ಇರುವ ಆ ಊರ್ಧ್ವಾತಿಊರ್ಧ್ವ ನೆಲೆಯಲ್ಲಿ ಇದ್ದ ಋತವು, ಅನಂತವಾಗಿ ನಿರಾಕಾರವಾಗಿ ಇರಲು ಬಯಸದೇ, ತನ್ನನ್ನು ತಾನು ಆಯಾಮಗಳಲ್ಲಿ ಕಂಡುಕೊಳ್ಳಲು ಬಯಸುತ್ತದೆ. ಅದಕ್ಕಾಗಿ ರೂಪಾಂತರಗೊಳ್ಳುವದು ನಿಸರ್ಗ ಸಹಜ ಕ್ರಿಯೆಯಾಗುತ್ತದೆ. ಈ ರೂಪಾಂತರದ ಅನುಭವಕ್ಕಾಗಿ, ರೂಪಾಂತರವನ್ನು ಹೊಂದಲು ಅನುಕೂಲವಿರುವ ಭೂ–ಬದುಕಿನ ಸ್ತರಕ್ಕೆ ಅವತರಣಗೊಂಡು ಬರುತ್ತದೆ. ಆಗ, ಅವಕಾಶದ ಸುರಕ್ಷಾವಲಯವಿರುವ ಈ ಭೂ–ಬದುಕಿನ ವಲಯಕ್ಕೆ ಸೂಕ್ಷ್ಮಾತಿಸೂಕ್ಷ್ಮ ಅಣುವಿನಾಕಾರದಲ್ಲಿ, ಪ್ರವೇಶ ಮಾಡುತ್ತದೆ. ಅದಕ್ಕಾಗಿ ಬ್ರಹ್ಮಾಂಡವನ್ನೆಲ್ಲ ಅರಸಿಕೊಂಡು, ಸುರಕ್ಷಾವಲಯವನ್ನು ಅರಸಿಕೊಂಡು ಬರುವ ಈ ಪ್ರಕ್ರಿಯೆಯು ಯಜ್ಞವಾಗಿರುತ್ತದೆ. ಹೀಗಾಗಿ ವಿಶ್ವ ನಿಯಮವನ್ನು ಭೂ ಬದುಕಿನಲ್ಲಿ ಕಾಣುವ ಪ್ರಕ್ರಿಯೆಯು ಯಜ್ಞವಾಗಿದೆ. ಇಂತಹ ಯಜ್ನದ ಮೂಲಕವೇ ನಿರಾಕಾರವಾಗಿರುವ ಆತ್ಮವು ಮಾನವ ದೇಹದಲ್ಲಿ ಹೃದಯ–ಜ್ಯೋತಿಯಾಗಿ ಸಾಕಾರಗೊಳ್ಳುತ್ತದೆ.

ಆದರೆ ಸುರಕ್ಷಾವಲಯ(ಗೋಲ್ಡೀ ಝೋನ್)ವನ್ನು ಪ್ರವೇಶಿಸುವಾಗ, ಸಹಜವಾಗಿಯೇ ನಿಸರ್ಗದ ನಿಯಮದಂತೆ ವಿಚಲನೆ ಹೊಂದುತ್ತದೆ. ಹೀಗಾಗಿ ಒಮ್ಮೆ ಈ ಭೂ ಬದುಕಿನ ಗುರುತ್ವಕ್ಕೆ ಸಿಲುಕಿದ “ಆತ್ಮ” ಮತ್ತೆ ತನ್ನ ಮೂಲ ನೆಲೆಗೆ ಹೋಗುವದು ಸುಲಭ ಸಾಧ್ಯವಲ್ಲ. ಅದರಲ್ಲೂ ವಿಭ್ರಮಕಾರೀ ಆಕರ್ಷಣೆಯ ಗುರುತ್ವವಂತೂ ಮೇಲೇರದಂತೆ – ವಿಕಸನಗೊಳ್ಳದಂತೆ ಅಡೆ–ತಡೆ ಒಡ್ಡುತ್ತಲೇ ಇರುತ್ತದೆ. ನಶ್ವರದ ಬದುಕಿನ ಸೀಮಿತ ವಲಯದಲ್ಲಿಯೇ ಕಾಲ್ಪನಿಕ ಸುಖದ ಪರಿಕಲ್ಪನೆಯಲ್ಲಿ ಸಂತೃಪ್ತಿಯನ್ನು ಕಂಡಂತೆ (ಸಂ)ಭ್ರಮಿಸುತ್ತದೆ.

ಇಂತಹ ವಿಸಂಗತೆಯನ್ನು ಯಜ್ಞ ಮಾತ್ರ ಯಶಸ್ವಿಯಾಗಿ ತಡೆಯಬಲ್ಲುದು. ಏಕೆಂದರೆ ಯಜ್ಞವು ವಿಶ್ವ ರಚನೆಯ ಕ್ರಮವಾಗಿದೆ. ಇದು ಬ್ರಹ್ಮಾಂಡದ ಸೂತ್ರವೂ ಹೌದು. ಪರಿಪೂರ್ಣತೆಯ ಪಥದ ಆದಿಯಿಂದ ಹಿಡಿದು ಅಂತ್ಯದವರೆಗೂ ಸದಾಕಾಲವೂ ನಡೆಯುತ್ತಲೇ ಇರುವ ಕ್ರಿಯೆಯಾಗಿದೆ. ಮಾನವ ಪ್ರಜ್ಞೆಗೆ ವಿಶ್ವ ರಹಸ್ಯವನ್ನು ಅರಸುವ ಪಥವನ್ನು ತೋರಿಸಿ, ಅಲ್ಲಿ ಪಯಣಿಸಲಿರುವವರಿಗೆ ಮಾರ್ಗದರ್ಶನ ಮಾಡುವ ಕ್ರಿಯೆಯೇ ಯಜ್ಞವಾಗಿದೆ.

ವಾಸ್ತವದ ವಿರೋಧಾಭಾಸವೆಂದರೆ, ಆ ತೆರನಾಗಿ ಇದ್ದ ವೇದದ ಅರ್ಥವನ್ನು ಹ್ರಸ್ವಗೊಳಿಸಿ, ಹೋಮವನ್ನಾಗಿಸಿಯೋ ಅಥವಾ ಯಾಗವನ್ನಾಗಿಸಿಯೋ ಪರಿವರ್ತಿಸಲಾಯಿತು. ಲೌಕಿಕ ಬಯಕೆಗಳು ಈಡೇರಬೇಕೆಂದರೆ ಇವುಗಳನ್ನು ಮಾಡಲೇಬೇಕು ಎಂದು ವಿಚಲನೆಗೊಳಿಸಲ್ಪಟ್ಟ ಸಂಗತಿಗಳನ್ನೇ ವ್ಯವಸ್ಥಿತವಾಗಿ ಪ್ರಚುರಪಡಿಸಲಾಯಿತು. ಯಜ್ಞದ ಮೂಲ ಉದ್ದೇಶವಾದ ಪೂರ್ಣದಿಂದ ಬಂದು ಪೂರ್ಣತ್ವ ಪರಿಪಕ್ವ ಪರಿಪೂರ್ಣತೆಯತ್ತ ಸಾಗಬೇಕಾಗಿದ್ದ ಉದಾತ್ತ ಪಥವನ್ನು ವಿಚಲನೆಗೊಳಿಸಲಾಯಿತು. ಹೀಗಾಗಿ ಹೋಲೋಕಾಸ್ಟ ಎನ್ನುವದು ನಿಷೇಧಾತ್ಮಕ ರೂಪದಲ್ಲಿಯೇ ಸಂಗತವಾಗತೊಡಗಿತು. ಇದನ್ನು ಸೂಕ್ತಗೊಳಿಸಿದ ಕೃತಿ "ಸಾವಿತ್ರೀ".

ಸಮಾಜ ಮತ್ತು ಸಾಮಾಜಿಕ ಮೌಲ್ಯಗಳು ಮತ್ತು ಸಾಂಸ್ಕೃತಿಕ ಬದುಕು ಹಾಗೂ ಸಾಮರಸ್ಯಗಳು ಆಯಾ ಪರಿಸರದ ಭಾಷಾ ವ್ಯವಸ್ಥೆಯಲ್ಲಿಯೇ ರೂಪುಗೊಳ್ಳುತ್ತ ಪರಿಷ್ಕೃತವಾಗುತ್ತಿರುತ್ತದೆ. ಒಂದು ವೇಳೆ ಇಲ್ಲಿ ನಿರ್ಮಿತಿಗೊಳ್ಳುವ ಭಾಷಾ ವ್ಯವಸ್ಥೆಯಲ್ಲಿ ಸಾಮಾಜಿಕ ಬದುಕಿನ ತುರ್ತುಗಳೇ ಪ್ರಧಾನವಾಗಿ, ತಾತ್ಕಾಲಿಕ ಶಮನಗಳೇ ಅಂತಿಮ ಗುರಿಯಾಗಿ, ಅದೇ ತೆರನಾಗಿ ರೂಪಿತಗೊಂಡ ಅರ್ಥವೇ ಪ್ರಧಾನವಾಗಿ ಬಿಡುತ್ತದೆ. ಹೀಗಾಗಿ ಈ ರೀತಿ ವಿಚಲನಗೊಂಡ ಶಬ್ದಗಳನ್ನೇ ಆಧಾರವನ್ನಾಗಿಸಿ ಪೀಳಿಗೆಗೆ ಮಾರ್ಗದರ್ಶನವೂ ನಡೆಯುತ್ತದೆ. ಇಂದು ಇಂಗ್ಲೀಷಿನ ಮೂಲಕ ಸಂಸ್ಕೃತವನ್ನು ಕಲಿಯುತ್ತಿರುವ ಸಂದರ್ಭದಲ್ಲಂತೂ ಇಂತಹ ಅಸಂಗತಗಳ ಸರಣಿಯೇ ಇದೆ. ಭಾರತೀಯ ಸಾಂಸ್ಕೃತಿಕ ಮತ್ತು ಜೀವನ ವಿಧಾನದ ಹಿನ್ನೆಲೆಯಲ್ಲಿ ಹೋಲೋಕಾಸ್ಟ ಎನ್ನುವದನ್ನು ಯಜ್ಞ ಎಂದು ಅರ್ಥೈಸಿಕೊಂಡಲ್ಲಿ ಹೊಸದೊಂದು ಹೊಳಹು ಕಾಣುತ್ತದೆ.

ಈ ಅವಕಾಶದಲ್ಲಿ ಮಾನವನ ಬದುಕು ಮತ್ತು ಅವನ ಚಿಂತನಗಳು ಸದಾ ಊರ್ಧ್ವಮುಖಿಯಾಗಿ ಪ್ರಗತಿಗೊಳ್ಳಬೇಕೆಂಬುದೆ ನಿಯತಿಯ ಇಚ್ಛೆಯಾಗಿದೆ. ಅನಂತಾನಂತವಾಗಿರುವ ವ್ಯೋಮಾಂತರಂಗದಲ್ಲಿ, ಸದ್ಯ ನಾವು ಈ ಭೂಮಿಯ

ಮೇಲೆ ಇರುವದು ಎಂದರೆ, ಸುದೀರ್ಘ ಪಯಣದಲ್ಲಿ ಒಂದು ನಿಲು–ತಾಣವಾಗಿ ಅಷ್ಟೇ. 'ತಾರೆ–ತಾರೆಗಳು ಮೈಲುಗಲ್ಲುಗಳಾಗಿ, ನೀಹಾರಗಳು ತಂಗುದಾಣ'ಗಳಾಗಿ ನಮ್ಮ ಪ್ರಯಾಣಕ್ಕೆ ಸದಾ ಮಾರ್ಗದರ್ಶಿಯಾಗಿವೆ. ಈ ಭೂಮಸ್ವರೂಪದ ಯಾನವನ್ನು ಪ್ರಾರಂಭಿಸಲು ನಮ್ಮ ಈ ಭೂ–ಬದುಕಿನ ಜೀವನ ವಿಧಾನ 'ಸತ್ವ ಪ್ರಧಾನವಾಗಿರಬೇಕು' ಎಂದೇ ವೈಶ್ವಿಕ ಸತ್ಯಗಳಿವೆ. ಇದೇ ಋಷಿಗಳು ಬದುಕುತ್ತಿದ್ದ 'ಋಜು ಜೀವನ ಮಾರ್ಗಸೂತ್ರಗಳೇ' ಆಗಿವೆ. ಋತದ ಆಣತಿಯಂತೆ ಬದುಕುವದು ಪ್ರಕೃತಿಯ ಸ್ವರೂಪ. ಮಾನವನೂ ಈ ಪ್ರಕೃತಿಯ ಒಂದಂಶವೇ ಆಗಿರುವದರಿಂದ, ಇದನ್ನು ಆಯಾ ಕಾಲದಲ್ಲಿ ಪರಿವರ್ತನೆಯ ಮೂಲಕ ಸ್ವರೂಪ ಮತ್ತು ಆಯಾಮ ಪಡೆದುಕೊಳ್ಳುತ್ತ ವಿಕಾಸವಾಗುತ್ತಿರುವ, ಮಾನವನ ಚೇತನವು ದೈವೀ ಚೈತನ್ಯವಾಗುವ ಪಥವನ್ನು ಅನುಸರಿಸುತ್ತದೆ. ಆದರೆ ಭೌತಿಕ ಬದುಕಿನ ಆಕರ್ಷಣೆಗಳಲ್ಲಿ ಸಿಲುಕಿದ ಮಾನವನ ಮನಸ್ಸು, ತನ್ನದೇ ಅತ್ಮದ ತುಡಿತವಾಗಿರುವ ಈ ದಿವ್ಯತ್ವದ ಪಥವನ್ನು ಕುರಿತು ವಿಚಾರಿಸುವದೇ ಇಲ್ಲ. ಇದು ಮಾಯೆಯೋ ಅಥವಾ ಅಜ್ಞಾನವೋ ಅಥವಾ ಮಾನವನ ಸ್ವಭಾವ ಇದನ್ನರಿತುಕೊಳ್ಳಲು ಇನ್ನೂ ಪಕ್ವಗೊಂಡಿಲ್ಲವೋ ಎನ್ನುವದು ಜಿಜ್ಞಾಸೆಯಲ್ಲಿದೆ.

ಸಾತ್ವಿಕ ಸ್ವರೂಪದ ಜೀವನ ವಿಧಾನ ಮತ್ತು ಅದರ ಗುರಿ ಎಂದರೆ ಏನು ಎನ್ನುವ ಪ್ರಶ್ನೆಗೆ ಶ್ರೀ ಅರವಿಂದರು 'ಸಾವಿತ್ರಿ'ಯಲ್ಲಿ ಅತ್ಯಂತ ಸ್ಪಷ್ಟವಾಗಿ;

**ನನ್ನಾತ್ಮವೀಗ ಖಚಿತದಲಿ ದೇವ ಋತವನ್ನು ಕಂಡುಕೊಳಲು**
**ನಮ್ಮಾತ್ಮವೀಗ ಸಪ್ರೇಮದಲ್ಲಿ ದಿವ್ಯದಲಿ ಮಿಂದು ನಿಲಲು**
**ನಮ್ಮಾತ್ಮವೀಗ ದೇವ–ಮಿಲನದಲಿ ಏಕಾತ್ಮವಾಗಲೆಂದು**
**ವಿಶ್ವನಿಯತಿಯಾ ನಮ್ಮಾತ್ಮ–ಬದುಕು ದೈವದೊಲು ಪುನರ್–ರೂಪ**
**ಮೃಣ್ಮಯದಬದುಕು, ಇದು ಈಗ "ದಿವ್ಯ–ಜೀವನ"ದ ನಿತ್ಯ–ದೀಪ**

**(ಸಾವಿತ್ರಿ; 10–4–663)**

ಸಾತ್ವಿಕ ಜೀವನದ ಅನುಷ್ಠಾನದಿಂದ ಏನನ್ನು ಪಡೆದುಕೊಳ್ಳಬಹುದು ಎನ್ನುವದನ್ನು 'ದಿವ್ಯ–ಜೀವನ' ಅತ್ಯಂತ ಸೂಕ್ಷ್ಮ ಸಂಗತಿಗಳನ್ನೂ ತೋರಿಸುತ್ತಿದೆ. ಮಾನವನ ಗುರಿ 'ದಿವ್ಯ–ಜೀವನ'ವನ್ನು ಪಡೆದುಕೊಳ್ಳುವದೇ ಆಗಿದೆ. ಇದು ನಿಯತಿ ಲಿಖಿತ. ಇದನ್ನು ನಾವು ತೀವ್ರಗತಿಯಲ್ಲಿಯೂ ಸಾಧಿಸಿಕೊಳ್ಳಬಹುದು ಎನ್ನುವದೇ 'ಸಾತ್ವಿಕ ಜೀವನದ ಸೂತ್ರ'ಗಳಾಗಿವೆ. ಆಧುನಿಕ ಜಗತ್ತಿನ ವೈಜ್ಞಾನಿಕ ಆವಿಷ್ಕಾರಗಳ

ಆಕರ್ಷಣೆಯಲ್ಲಿ ಸಿಲುಕಿಕೊಂಡ ಮಾನವನ ಬದುಕು ವೈಚಾರಿಕವಾಗಿ ಪ್ರಖರವಾಗುತ್ತಿದೆ ಪ್ರಖರಗೊಳ್ಳುತ್ತಿದೆ ಎನ್ನುವ ಭಾವದಲ್ಲಿ, ಮಾನವ ಸಹಜವಾಗಿರುವ ಪ್ರೇಮ, ಪ್ರೀತಿ, ವಾತ್ಸಲ್ಯ ಮತ್ತು ಸಮತೆಗಳನ್ನು ದೂರಮಾಡಿಕೊಂಡು ಮಾರ್ದವತೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಮಾರ್ದವತೆ ಇಲ್ಲದ ವೈಚಾರಿಕತೆ ರೂಕ್ಷತೆಯನ್ನು ಪ್ರತಿಷ್ಠಾಪಿಸುತ್ತದೆ; ವೈಚಾರಿಕತೆ ಇಲ್ಲದ ಮಾರ್ದವತೆ ಕೇವಲ ಛಾಯಾಸ್ವರೂಪದ ಜೀವನಕ್ಕೇ ನಿಗದಿಗೊಳಿಸಿಕೊಳ್ಳುತ್ತಿದೆ.

ಇವೆರಡನ್ನೂ ಸಮನ್ವಯಗೊಳಿಸಿಕೊಳ್ಳುವ ವಿಧಾನವೇ ‘ಸಾತ್ವಿಕ ಪಥ’ದ ಸ್ವರೂಪವಾಗಿದೆ.

ಅದ್ಭುತಾಧ್ಭುತದ ಉದ್ಭೂತ ಶಕ್ತಿ ಜೊತೆ ಸ್ವರ್ಣ ವರ್ಣಜ್ವಾಲೆ
ಜೊತೆಯಲ್ಲಿ ಪ್ರಕೃತಿ ಕಂಪನದಿ ನಿತ್ಯ ವಿಕಸನದ ನವ್ಯ ಲೀಲೆ.
ಕೆಲವೊಂದು ಘಳಿಗೆ ವಿಶ್ವಾತ್ಮ ರೂಹು ನಮ್ಮೆಲ್ಲರನ್ನು ಕಂಡು
ತನ್ನಾತ್ಮ ತತ್ತ್ವದಾಂತರ್ಯದಂತೆ ಸ್ವಾಧೀನವಿಟ್ಟುಕೊಂಡು

ಪೋಷಿಸಿರೆ ಪೂರ್ಣ, ಪೂರ್ಣತ್ವದೆಡೆಗೆ ಪಥ ಕೊರೆವ ವಿಶ್ವ ತಥ್ಯ
ನಾವೀಗಲೂನು ಅರಿಯಲಿದೆ ಅದನು, ಅದು ನಮ್ಮದೆಂಬ ಸತ್ಯ;
ನಮ್ಮಾತ್ಮವೆಲ್ಲ ಒಮ್ಮತದ ಇಂದು, ಸಮ್ಮತಿಸಿ ಅಂತು ನೆಲೆಯ
ನಮ್ಮುಸಿರಿಗೀಗ ಪರಮಾತ್ಮನಿಂದು ಆರಾಧ್ಯ ಭಾವಕೊಡೆಯ.

ಭವ ಬದುಕ ಕವಚದಾ ಕ್ಷೀಣ ಹಂತದಲು ಸಹಿತ ಹಣುಕಿ ನಿಂತ
ಅಹಂ–ತತ್ತ್ವವಿದು ಕರಗುತಲಿ ಈಗ, ಮರೆಯಾಗಲೆಂದು ಸತತ;
ಸ್ವಯಂ ಸ್ಥಿತಿ ಭಾರ ಹೊಂದಿ ನಿಂತಿರುವ ಭಾವಕ್ಕೆ ರೂಪವಾಗಿ
ಆಗ್ರಹದಿ ಮತ್ತೆ ಬಯಕೆಗಳನಿಡದೆ ನಿಗ್ರಹಿಸಿಕೊಂಡು ಸಾಗಿ

ತಂತಾನೆ ತಾನು ಅಸ್ತಿತ್ವ ಪಡೆವ ಅತಿಸೂಕ್ಷ್ಮ ವಿಷಯದಂತೆ
ವೈಶಿಷ್ಟ್ಯಪೂರ್ಣ ಸೃಷ್ಟಿ ದೃಷ್ಟಿಯಾ ಕಳಚುತಲಿ ಸಾಗಿದಂತೆ,
ಪ್ರಕೃತಿಯಲಿ ಕರಗಿ ಜೊತೆ ದೈವವಾಗೆ ನಮ್ಮೆಲ್ಲರನ್ನು ಈಗ
ಮುಕ್ತಗೊಳಿಸುತಲಿ ಶಕ್ತವಾಗಿಸಲೆ, ಏಕಾತ್ಮ ಬಂಧವಾಗ

**– ಪುಟ್ಟು ಕುಲಕರ್ಣಿ**
**(ಸಾವಿತ್ರೀ ದಳ 1 ರೇಣು 4 ಪುಟ47)**

# ಸಾಕ್ಷಾತ್ಕಾರಕ್ಕೆ ದ್ವಾರ (ಪ್ರವೇಶ)

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಸಾಕ್ಷಾತ್ಕಾರಕ್ಕೆ ದ್ವಾರ (ಪ್ರವೇಶ)**

...ನೀವು ಗ್ರಹಿಸಿದಾಕ್ಷಣ ಮತ್ತು ಯಾವುದೋ ಒಂದು ರೀತಿಯಲ್ಲಿ ನೀವು ಭಾವಿಸಿದಾಕ್ಷಣ, ಅಥವಾ ಆರಂಭದ ಹಂತದಲ್ಲಿಯೂ ಸಹ, ದೇವನು ನಿಮ್ಮಲ್ಲಿದ್ದಾನೆ, ಹಾಗೆಯೇ ನೀವು ದೇವನಲ್ಲಿದ್ದೀರಿ ಎನ್ನುವುದನ್ನು ಒಪ್ಪಿಕೊಳ್ಳಿ, ಇದು ಆಗಲೇ ಸಾಕ್ಷಾತ್ಕಾರಕ್ಕೆ ಪ್ರವೇಶ ದ್ವಾರವನ್ನು ಕೊಂಚ ಮುಕ್ತವಾಗಿಸುತ್ತದೆ –ಅರೆತೆರೆಯುತ್ತದೆ. ನಂತರದಲ್ಲಿ, ಅರಿತುಕೊಳ್ಳುವ ಮತ್ತು ಹಾಗಿರುವ ತೀವ್ರ ಬಯಕೆಯ ಆಕಾಂಕ್ಷೆಯು ಬಂದಾಗ, ಆ ತೀವ್ರ ಬಯಕೆಯು ನಾವು ಒಳ ನುಸುಳುವವರೆಗೆ ಮಾರ್ಗವನ್ನು ವಿಸ್ತಾರಗೊಳಿಸುತ್ತದೆ. ನುಸುಳಿಯಾದ ಮೇಲೆ, ನಾವು ಏನಾಗಿದ್ದೇವೆ ಎನ್ನುವುದರ ಅರಿವು ಮೂಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/236 – ಶ್ರೀಮಾತೆ**

ಒಂದು ಸ್ಥರದಿಂದ ಇನ್ನೊಂದಕ್ಕೆ, ಒಂದು ಪ್ರಜ್ಞೆಯಿಂದ ಇನ್ನೊಂದಕ್ಕೆ ಎಲ್ಲ ಅಂಕಿತಗಳನ್ನು (ಮುದ್ರೆಗಳನ್ನು) ಹಿಂದೆ ಬಿಡುತ್ತ ನಾವು ಮುಂದೆ ಕಂಡುಕೊಳ್ಳಲು ನಾವು ಧುಮುಕಬೇಕು; ಇಳಿಯುತ್ತ–ಇಳಿಯುತ್ತ ಇರಲೇಬೇಕು, ನಿರ್ಮಲ ಶಾಂತಿಯನ್ನು ಕಂಡುಕೊಳ್ಳಲು ಅಂತರಂಗವನ್ನು ಪ್ರವೇಶಿಸಬೇಕು. ಪುರುಷನ ಈ ಅಗಾಧವಾದ ಪ್ರಶಾಂತತೆಯಲ್ಲಿ, ಬಾಹ್ಯ ಗದ್ದಲದಿಂದ ದೂರ, ಯಾತನೆಯಿಂದ ಹಾಗೂ ನೋವಿನಿಂದ ದೂರ, ಆಲೋಚನೆಗಳಿಂದ ಹಾಗೂ ಕಲ್ಪನೆಗಳಿಂದ ದೂರ, ಇಂದ್ರಿಯಗಳ ಅಲೆಗಳಿಂದ ಅತಿ ದೂರದಲ್ಲಿ, ಅಹಮಿಕೆಯ ಅಸ್ತಿತ್ವವಿರದಲ್ಲಿ, ಅಂತಃಪುರುಷನ ಇರುವಿಕೆಯನ್ನು ಅನುಭವಿಸಲು ನಾವು ಬಹಳ ಎಚ್ಚರಿಕೆಯಿಂದ ಪ್ರವೇಶಿಸಬೇಕು. ಅತ್ಯಂತ ಪ್ರಭಾವಿಯಾದ, ಎಲ್ಲವನ್ನೂ ನೆರವೇರಿಸುವಂಥ ಶಕ್ತಿಯು ಮಿಡಿಯುವಲ್ಲಿ ಪ್ರಜ್ಞೆಯನ್ನು ಒಳಗಡೆ (ಆಂತರಿಕವಾಗಿ) ತಿರುಗಿಸಲು, ಹೆಚ್ಚಿನದನ್ನು ಕಂಡುಕೊಳ್ಳಲು, ಇನ್ನೂ ಮುಂದೆ ಹೋಗಬೇಕಾಗಿದೆ. ಕ್ರಿಯೆ, ಪ್ರಭಾವ, ಅಹಮಿಕೆ, ಬೇರೆ ವ್ಯಕ್ತಿತ್ವ ಇಲ್ಲದಿರುವಲ್ಲಿ, ಆದರೆ ಸಂತಸದ

ಅಲೆಗಳಿರುವಲ್ಲಿ, ಮತ್ತು ಪ್ರತಿಯೊಂದರ ಮೂಲದಲ್ಲಿ ಇರುವಂಥ ಒಂದು ಸ್ಪಂದನವಿರುವಲ್ಲಿ, ಆ ರೀತಿಯ (ಸನ್ನೆ) ಸಮಾನ ಮತ್ತು ಪರಿಪೂರ್ಣ ಸಮಚಿತ್ತತೆಯು ಇರುವಲ್ಲಿ ಇನ್ನೂ ಆಳಕ್ಕೆ ನಾವು ಹೋಗಲೇಬೇಕು. ಈ ಪರಿಪೂರ್ಣ ಹಾಗೂ ನಿರ್ವಿಕಲ್ಪ ಶಾಂತಿಯನ್ನು ಅನುಭವಿಸಲು ಮತ್ತು ಅದರಲ್ಲಿ ಒಂದಾಗಿರಲು... ನಂತರ, ಪ್ರಜ್ಞೆಯು ಪ್ರಧಾನ ಪುರುಷನೊಡನೆ ಗುರುತಿಸಿಕೊಂಡ ಆ ನಿರ್ಮಲವಾದ ದಿವ್ಯಾನಂದದಲ್ಲಿ ಪ್ರವೇಶಿಸಲು ನಾವು ಇನ್ನೂ ಇನ್ನೂ ಆಳಕ್ಕೆ ಹೋಗಬೇಕು. ಅಲ್ಲಿ ದ್ವಂದ್ವಭಾವ ಇಲ್ಲವೇ ಇಲ್ಲ, ಅಸ್ತಿತ್ವ ಇಲ್ಲ, ಏನೂ ಇಲ್ಲ – ಈ ಅವಿನಾಶಿ ಜ್ಯೋತಿಯೊಡನೆ, ಅಂತರ್ಯಾಮಿ ದೇವನೊಡನೆ, ವಿಶಿಷ್ಟ ಹಾಗೂ ಏಕವಾದ, ನಮ್ಮಲ್ಲಿ ನೆಲೆಸಿರುವಂಥ ಆತ್ಮನೊಡನೆ ಒಂದಾಗಿರಲು ಆಂತರ್ಯದಲ್ಲಿ ಆಳಕ್ಕೆ ಹೋಗಬೇಕು.

ಇನ್ನೂ ಆಳವಾದ ಈ ಪರಿಶುದ್ಧಗೊಳಿಸುವ ಜ್ಯೋತಿಯಲ್ಲಿ ಶ್ರೀ ಅರವಿಂದರು ನೆಲೆಸಿರುತ್ತಾರೆ – ನಿರ್ವಿಕಲ್ಪ ಆನಂದ, ಸರ್ವ ಸಮರ್ಥ, ಅಜೇಯ, ನಮ್ಮ ಇರುವಿಕೆಯ ಪರಮಶಕ್ತ ಪ್ರಭು, ಅಸ್ತಿತ್ವದಲ್ಲಿ ಸರ್ವವ್ಯಾಪಿತ್ವದ ಅಭಿವ್ಯಕ್ತಿ, ಅವನ ಅನುಷ್ಠಾನದಲ್ಲಿನ ಸರ್ವಶಕ್ತತೆ, ಅಭಿವ್ಯಕ್ತಗೊಂಡ ಶ್ರೇಷ್ಠ ಶಕ್ತಿಯ ಸರ್ವಜ್ಞತೆ; ಗುರಿಯಾಗಿದ್ದವರು, ಪ್ರಭುವಾಗಿದ್ದವರು, ಅಕ್ಕರೆಯಾಗಿದ್ದವರು, – ಸರ್ವಶಕ್ತ ದೊರೆಯೂ ಸಹ.

ನಾವು ನಿಜವಾಗಿಯೂ ಅವರನ್ನು ಕೂಗಿದಾಗ, ಶ್ರೀ ಅರವಿಂದರು ಅಲ್ಲಿಂದ (ಶ್ರೀಮಾತೆಯವರು ಹೃದಯವನ್ನು ತೋರಿಸುತ್ತಾರೆ) ಉತ್ತರಿಸುತ್ತಾರೆ. ಹೃದಯವು ಅವರ ಹೆಸರಿನಿಂದ, ಅವರ ಪ್ರಜ್ಞೆಯಿಂದ ಮಿಡಿಯುತ್ತದೆ; ಶ್ರೀ ಅರವಿಂದರ ಹೆಸರು ಅಲ್ಲಿ ಪ್ರತಿಧ್ವನಿಸುತ್ತದೆ, ಯಾಕೆಂದರೆ ಅವರ ಅಂಕಿತ ಅಲ್ಲಿದೆ (ಸನ್ನೆ).

ಅಂತರಾಳದಲ್ಲಿ ಅವರು ನೆಲೆಸುತ್ತಾರೆ... ಎಲ್ಲ ಅಸ್ತಿತ್ವವು ಅವರಿಂದ ಜೀವಿಸಿದೆ. ಅಸ್ತಿತ್ವವು ಅವರಿಂದ ಮಿಡಿಯುತ್ತದೆ. ಸಂಪೂರ್ಣ ವಿಶ್ವವು ಅವರಿಂದ ಮಿಡಿಯುತ್ತದೆ. ಅವರು, ಅವರ ಇರುವಿಕೆಯಿಂದ ಸತ್ವಶಾಲಿಯಾಗಿ ಹಾಗೂ ಪ್ರೇರಣೆಯಾಗಿ ಪ್ರತಿಯೊಂದರಲ್ಲೂ ಇದ್ದಾರೆ.

ಅವರ ನಾಮಸ್ಮರಣೆಯ ಮಹದಾನಂದವು ಎಲ್ಲವನ್ನೂ ವ್ಯಾಪಿಸುತ್ತದೆ ಮತ್ತು ಶುದ್ಧಗೊಳಿಸುತ್ತದೆ, ಶಾಶ್ವತ ಹಾಗೂ ನೈಜವಾದ ಉನ್ನತ ಆನಂದದಲ್ಲಿ ಎಲ್ಲೆಲ್ಲಿಯೂ

ಅನುರಣಿಸುತ್ತದೆ, ಅವರ ನಾಮದಿಂದ ಈ ಜಗತ್ತು ಒಂದು ಅರ್ಥವನ್ನು ಪಡೆದುಕೊಳ್ಳುತ್ತದೆ. ಈ ಅಖಂಡ ವಿಶ್ವದಲ್ಲಿ ಪ್ರತಿಯೊಂದರಲ್ಲೂ ಗುಪ್ತವಾದಂಥ ಅಂತರ್ಯಾಮಿ ಭಗವಂತನನ್ನು ಪುನಃ ಕಂಡುಕೊಳ್ಳಲು .... ಅವನನ್ನು ಕಂಡುಕೊಳ್ಳುವುದು ನಿರಂತರವಾದ ಕ್ರೀಡೆ. ಅವನನ್ನು ಅನುಭವಿಸುವುದೆಂದರೆ ಪರಿಪೂರ್ಣ ಶುದ್ಧತೆಯ ನಿರ್ವಿಕಲ್ಪ ಶಾಂತಿಯನ್ನು ಅನುಭವಿಸಿದಂತೆ. ಅವನನ್ನು ಸಾಕ್ಷಾತ್ಕರಿಸಿಕೊಳ್ಳುವುದೆಂದರೆ ಅಮಿತಾನಂದವನ್ನು ಕಂಡುಕೊಂಡಂತೆ. ಅವನನ್ನು ಆಹ್ವಾನಿಸುವುದು, ಅನಂತತೆಯ ದ್ವಾರಗಳನ್ನು ತೆಗೆದಂತೆ. ಇದು ಶ್ರೀ ಅರವಿಂದರ ನಾಮದ ಹಿಂದಿರುವ ಪ್ರಭಾವ (ಸಮಾಧಿ)....

ದೇವನ ಉಪಸ್ಥಿತಿ ಮತ್ತು ಉನ್ನತಾನಂದವು ನಿರಂತರ ಕೃತಜ್ಞತೆಯ ಕಾರ್ಯದಲ್ಲಿಯ ಸ್ವ–ಸಮರ್ಪಣೆಯ ಅದ್ಭುತ ಅನುಭೂತಿಯೊಂದಿಗೆ ನಮ್ಮ ಪುರುಷನನ್ನು (ನಮ್ಮನ್ನು) ಆವರಿಸುವುದು, ಮತ್ತು ನಮ್ಮನ್ನು ನಾವು ನಮ್ಮ ಇರುವಿಕೆಯ ಸರ್ವೋಚ್ಚ ಪ್ರಭುವಿಗೆ ಶಾಂತ ಉಪಾಸನೆಯಲ್ಲಿ ಸಮರ್ಪಿಸಿಕೊಳ್ಳುವುದು: ಇದು ಕೃತಜ್ಞತೆಯ ಅರ್ಥ.

*ಪ್ರಶ್ನೆ: ಆದರೆ ಶ್ರೀಮಾತೆಯವರೆ, ನೀವು ನಮ್ಮೊಳಗಡೆ ಇದ್ದೀರಿ ಎಂದು ಶ್ರೀ ಅರವಿಂದರು ಸದಾ ಹೇಳುತ್ತಿದ್ದರು.*

ಹೌದು, ಅದು ನಿಜ, ಸಂಪೂರ್ಣವಾಗಿ ನಿಜ.

ನಾನು, ನಿರಂತರ ಜ್ಯೋತಿಯಲ್ಲಿ ಆವಿರ್ಭಾವವಾಗಿರುವೆನು, ಕ್ರಿಯೆಯನ್ನು ಪ್ರೇರಿಸುವ ಹಾಗೂ ಅರಂಭಿಸುವ ಪ್ರಭಾವವಾಗಿ ನಾನಲ್ಲಿರುವೆನು, ಮಧುರವಾದ ಹಾಗೂ ಸ್ವಸ್ಥವಾದ ಎಲ್ಲವನ್ನೂ ಒದಗಿಸುವ ಶಾಂತಮೂರ್ತಿಯಾಗಿ ನಾನಲ್ಲಿರುವೆನು, ಉಕ್ಕಿಹರಿಯುವ ಹಾಗೂ ನಿಯಂತ್ರಿಸುವ ಆನಂದವಾಗಿರುವೆನು, ಶುದ್ಧಿಗೊಳಿಸುವ ದೀಪವಾಗಿರುವೆನು, ಮತ್ತು ಶಿಕ್ಷಿಸುವಂಥ ಕಂಪನವಾಗಿರುವೆನು.

ಆಧಾರವಾಗಿರುವ ಅಂಶವಾಗಿ ಶ್ರೀ ಅರವಿಂದರು ಅಲ್ಲಿದ್ದಾರೆ, ಮತ್ತು ನಾನು ಒಬ್ಬ ಮಾರ್ಗದರ್ಶಿಯಾಗಿ ಅಲ್ಲಿದ್ದೇನೆ. ವಾಸ್ತವದಲ್ಲಿ, ಎರಡರಲ್ಲೂ ಒಂದೇ ಅಂಶವಾಗಿ ನಾವಿದ್ದೇವೆ. ಒಬ್ಬರು ಗಮನಿಸುವ ಪ್ರಮಾಣವಾಗಿ ಮತ್ತು ಇನ್ನೊಬ್ಬರು ಅದನ್ನು ನೆರವೇರಿಸುವ ಶಕ್ತಿಯಾಗಿ, ಇದ್ದೇವೆ.

ಎಲ್ಲಿಯವರೆಗೆ ನಾವಿದನ್ನು ಅರಿತುಕೊಳ್ಳುವುದಿಲ್ಲವೊ, ನಾವು ಏನನ್ನೂ ತಿಳಿದುಕೊಳ್ಳಲಾರೆವು....

ಹೌದು ನನ್ನ ಮಗು, ನನ್ನನ್ನು ಮತ್ತು ಶ್ರೀ ಅರವಿಂದರನ್ನು (ವಾಸ್ತವದಲ್ಲಿ ನಾವೀರ್ವರೂ ಒಂದೆ) ಯಾರು ತಿಳಿದುಕೊಳ್ಳುತ್ತಾರೋ ಅವರಿಗೆ ಸತ್ಯದೆಡೆಗಿನ ಪ್ರಗತಿಯಲ್ಲಿ, – ಈ ಜೀವನದಲ್ಲಿ, ಹಾಗೆಯೇ ಸಾವಿನ ನಂತರದ ಮತ್ತು ಮುಂದಿನ ಜನ್ಮಗಳಲ್ಲಿ, – ಚಿರಕಾಲದವರೆಗೂ ಬರುವ ಎಲ್ಲ ವಿಘ್ನಗಳನ್ನು ಎಲ್ಲ ತೊಂದರೆಗಳನ್ನು, ಎಲ್ಲ ಆಮಿಷಗಳನ್ನು, ಎಲ್ಲ ಅಡ್ಡಿಗಳನ್ನು, – ಸರಿಸಿ, ಶಾಶ್ವತವಾಗಿ ಹೊರಹಾಕಲ್ಪಡುವವು.


ಹೌದು, ಅವನಿಗೆ ಆ ಪ್ರಭುವೇ ಸರ್ವಶಕ್ತನಾಗಿದ್ದಾನೆ.

"ಮಾ–ಶ್ರೀ ಅರವಿಂದೋ, ಮಾ–ಶ್ರೀ ಅರವಿಂದೋ" ... ಎಂದು ಪಠಿಸಿರಿ (ಸಮಾಧಿ).

(ಶ್ರೀಮಾತೆಯರೊಂದಿಗೆ ಮೋನಾ ಸರ್ಕಾರ್ ಅವರ ಸಂಭಾಷಣೆಯಿಂದ,
ದಿ ಸುಪ್ರಿಮ್, ಪುಟಗಳು. 79–82)

ನಾನು ಹೇಳಿದ್ದು ನೆನಪಿರಲಿ. ನನ್ನನ್ನು ಕಂಡುಕೊಳ್ಳಲು ಶ್ರಮಿಸು. ನಿನ್ನೆದುರಿಗೆ ನಾನು ತೋರಿದ ದಾರಿಯನ್ನು ಅನುಸರಿಸು. ಇದಕ್ಕೆ ಏನನ್ನೂ ಹೋಲಿಸಬಾರದು. ದೇವರನ್ನು ಮಾತ್ರ. ದೇವನನ್ನು ಕಂಡುಕೊಳ್ಳುವುದು – ಇದುವೇ ಜೀವನ, ಇದುವೇ ಗುರಿ, ಇದುವೇ ಆನಂದ! ದೇವರು ಸದಾ ನಿಮ್ಮೊಂದಿಗಿರುವಂತೆ ಅವನನ್ನು ಪ್ರೀತಿಸಿರಿ. ಎಲ್ಲವನ್ನೂ ಮಾಡುವವನು ಅವನೇ ಅಗಿರಲಿ. ಅವನು ನಿನ್ನೊಂದಿಗೆ ಕೈಜೋಡಿಸುತ್ತಾನೆ. ಅವನು ನಿನ್ನೊಡನೆ ಶ್ರಮಿಸುತ್ತಾನೆ. ಪ್ರತಿ ಕ್ಷಣವೂ ಅವನು ನಿನಗೆ ಮಾರ್ಗದರ್ಶನ ಮಾಡುತ್ತಾನೆ.

**ದಿ ಸುಪ್ರಿಮ್, ಪುಟ. 97** **– ಶ್ರೀಮಾತೆ**



“ಮಾ–ಶ್ರೀ ಅರವಿಂದೋ”

## ಜೀವನ–ಪಥದಲ್ಲಿ ನಿರಂತರದ ಜ್ಯೋತಿ

ದೇವನನ್ನು ಕಾಣಬಯಸುವ ಮನುಷ್ಯನು, ಹಂತಗಳಲ್ಲಿ ತಲುಪಲಾಗದ (ಕೈಗೆಟುಕದ) ಕಡೆಗೆ ಪುನರ್–ಆರೋಹಣ (ಪುನಃ ಏರುವ) ಪ್ರಯತ್ನ ಮಾಡಿದಾಗ, ಅವನ ಎಲ್ಲ ಜ್ಞಾನ ಮತ್ತು ಅವನ ಎಲ್ಲ ಒಳ ಅರಿವು ಈ ಅನಂತತೆಯಲ್ಲಿ ಒಂದು ಹೆಜ್ಜೆಯನ್ನೂ ಮುಂದೆ ಕೊಂಡೊಯ್ಯಲಾಗದು ಎನ್ನುವುದನ್ನು ಮರೆತು ಬಿಡುತ್ತಾನೆ; ತಾನು ಏನನ್ನು ಪಡೆದುಕೊಳ್ಳಬೇಕು ಎನ್ನುವುದು ಅವನಿಗೆ ತಿಳಿದಿಲ್ಲ, ತನ್ನಿಂದ ಯಾವುದು ಅತಿ ದೂರದಲ್ಲಿ ಇದೆ ಎಂದು ನಂಬಿದ್ದಾನೋ, ಅದು ಅವನ ಒಳಗಡೆಯೇ ಇದೆ.

ಅವನು ತನ್ನಲ್ಲಿಯ ಈ ಮೂಲವನ್ನು ಅರಿಯುವವರೆಗೆ ಆ ಮೂಲದ ಯಾವುದನ್ನೂ ತಿಳಿದುಕೊಳ್ಳುವುದು ಹೇಗೆ?

ಅದು, ತನ್ನನ್ನು ತಾನು ತಿಳಿದುಕೊಳ್ಳುವುದರಿಂದ ಸಾಧ್ಯ. ತನ್ನನ್ನು ತಾನು ತಿಳಿದುಕೊಳ್ಳಲು ಕಲಿಯುದರಿಂದ ಸಾಧ್ಯ. ಈ ರೀತಿ ಅತ್ಯುನ್ನತ ಅನ್ವೇಷಣೆಯನ್ನು ಮಾಡಬಹುದು. ಆಗ ಬೈಬಲ್ಲಿನಲ್ಲಿ ಬರುವ ಮನೆಯೊಡೆಯನಂತೆ, ಬೆರಗಿನಲ್ಲಿ "ದೇವ ಸನ್ನಿಧಿ ಇಲ್ಲೇ ಇದೆ, ಅದು ನನಗೆ ತಿಳಿದಿರಲಿಲ್ಲ" ಎಂದು ರೋದಿಸುತ್ತಾನೆ.

ಅದಕ್ಕಾಗಿ ನಾವು ಆ ಉದಾತ್ತ ಚಿಂತನೆಯನ್ನು, ಭೌತಿಕ ಜಗತ್ತುಗಳ ಸೃಜನಶೀಲತೆಯನ್ನು ವ್ಯಕ್ತಪಡಿಸಲೇಬೇಕು ಮತ್ತು ಸ್ವರ್ಗ ಮತ್ತು ಭುವಿಗಳನ್ನು ಆವರಿಸುವಂಥ "ನಾನು ಎಲ್ಲ ವಸ್ತುಗಳಲ್ಲಿ ಮತ್ತು ಎಲ್ಲ ಜೀವಿಗಳಲ್ಲಿ ಇದ್ದೇನೆ" ಎಂಬ ಶಬ್ದ ಎಲ್ಲರಿಗೂ ಗೊತ್ತು ಮಾಡಬೇಕು.

ಎಲ್ಲರೂ ಇದನ್ನು ತಿಳಿದುಕೊಂಡಾಗ, ಶ್ರೇಷ್ಠ ರೂಪಾಂತರಗಳ ಭರವಸೆಯನ್ನು ಮೂಡಿಸುವಂಥ ದಿನ ಸನ್ನಿಹಿತವಾಗುತ್ತದೆ. ಮನುಷ್ಯನು, ವಸ್ತುವಿನ ಪ್ರತಿ ಅಣುವಿನಲ್ಲೂ ದೇವನು ಅಂತಸ್ಥನಾಗಿರುವ ವಿಚಾರವನ್ನು ಅಂಗೀಕರಿಸಿದಾಗ, ಪ್ರತಿಯೊಂದು ಜೀವಿಯಲ್ಲೂ ಅವರು ದೇವನ ಇರುವಿಕೆಯ ಸುಳಿವನ್ನು ಗ್ರಹಿಸಿದಾಗ, ಪ್ರತಿ ಮಾನವನು ತನ್ನ ಸಹೋದರನಲ್ಲಿ ದೇವನನ್ನು ಕಾಣಬಹುದಾದಾಗ, ಕತ್ತಲೆಯನ್ನು, ಮಿಥ್ಯೆಯನ್ನು, ಅಜ್ಞಾನವನ್ನು, ಎಲ್ಲ ಪ್ರಕೃತಿಯ ಮೇಲೆ ತೂಗುವ ದೋಷ ಹಾಗೂ ಬಳಲಿಕೆಯನ್ನು ದೂರ ಮಾಡುವ ಮುಂಬೆಳಗು (ಜ್ಞಾನ–ಬೆಳಕು) ಮೂಡುತ್ತದೆ. ಪ್ರಕೃತಿಯು ದೇವ–ಸುತರ ದಿವ್ಯದರ್ಶನವನ್ನು ನಿರೀಕ್ಷಿಸುವಾಗ ಅವಳು ತೊಳಲಾಡುತ್ತಾಳೆ ಮತ್ತು ಶೋಕಿಸುತ್ತಾಳೆ.

ಇದು ನಿಜಕ್ಕೂ ಉಳಿದೆಲ್ಲವರನ್ನೂ ಒಂದಾಗಿಸುವ ಪ್ರಮುಖ ಚಿಂತನೆಯಾಗಿದೆ, ಸೂರ್ಯನು ಜೀವ–ಜಗತ್ತನ್ನು ಬೆಳಗುವ ಹಾಗೆ ನಮ್ಮ ಸ್ಮರಣೆಯಲ್ಲಿ ಇದು ಯಾವತ್ತಿಗೂ ಇರಲೇಬೇಕಾದ ಚಿಂತನೆಯಾಗಿದೆ.

ಅದಕ್ಕಾಗಿಯೇ ನಾನಿದನ್ನು ನಿನಗೆ ಜ್ಞಾಪಿಸುತ್ತಿದ್ದೇನೆ. ಈ ಚಿಂತನೆಯನ್ನು ಒಂದು ಅಪೂರ್ವವಾದ ಮಣಿಯಂತೆ, ಅತ್ಯಮೂಲ್ಯವಾದ ನಿಧಿಯಂತೆ ನಮ್ಮ ಹೃದಯದಲ್ಲಿ ಹೊತ್ತುಕೊಂಡು ನಮ್ಮ ಪಥವನ್ನು ಅನುಸರಿಸಿದರೆ, ನಮ್ಮೊಳಗಡೆ ಬೆಳಗುವ ಹಾಗೂ ರೂಪಾಂತರಗೊಳಿಸುವ ಕಾರ್ಯವನ್ನು ಮಾಡಲು ಅದಕ್ಕೆ ಸಮ್ಮತಿಸಿದರೆ, ಅದು ಎಲ್ಲ ಜೀವಿಗಳ ಹಾಗೂ ಎಲ್ಲ ವಸ್ತುಗಳ ಕೇಂದ್ರದಲ್ಲಿ ಇರುವುದನ್ನು ನಾವು ತಿಳಿಯಬಹುದಾಗಿದೆ, ಮತ್ತು ಅದರಲ್ಲಿ ನಾವು ವಿಶ್ವದ ಅದ್ಭುತವಾದ ಏಕತೆಯನ್ನು ಅನುಭವಿಸಬಹುದಾಗಿದೆ.

ಆಗ ನಾವು ನಮ್ಮ ಅಲ್ಪ ತೃಪ್ತಿಗಳ ದುರಹಂಕಾರ ಮತ್ತು ಬಾಲಿಶ ತನವನ್ನು, ನಮ್ಮ ಮೂರ್ಖತನದ ಜಗಳಗಳನ್ನು, ನಮ್ಮ ಚಿಲ್ಲರೆ ಅನುರಾಗಗಳನ್ನು, ನಮ್ಮ ಕುರುಡು ಕ್ರೋಧವನ್ನು ಅರ್ಥಮಾಡಿಕೊಳ್ಳುವೆವು. ನಾವು ನಮ್ಮ ಚಿಕ್ಕ ದೋಷಗಳ ವಿಸರ್ಜನವನ್ನು, ನಮ್ಮ ಸೀಮಿತ ವ್ಯಕ್ತಿತ್ವದ ಮತ್ತು ನಮ್ಮ ಮೊಂಡು ಅಹಂಭಾವದ ಕೊನೆಯ ಕಂದಕಗಳು ನಾಶವಾಗುವುದನ್ನು ನೋಡುವೆವು. ನಮ್ಮ ಸಂಕುಚಿತ ಮಿತಿಗಳಿಂದ ಹಾಗೂ ಮೇರೆಗಳಿಂದ ಬಿಡುಗಡೆಗೊಳಿಸುವಂಥ ನೈಜ ಆಧ್ಯಾತ್ಮಿಕತೆಯ ಉದಾತ್ತ ಪ್ರವಾಹದಗುಂಟ ಮುನ್ನಡೆಯುವದನ್ನು ನೋಡುವೆವು.

ವ್ಯಕ್ತಿ–ಆತ್ಮ ಮತ್ತು ವಿಶ್ವ–ಆತ್ಮ ಒಂದೇ ಆಗಿವೆ; ಪ್ರತಿಯೊಂದು ಪ್ರಪಂಚದಲ್ಲಿ, ಪ್ರತಿಯೊಂದು ಜೀವಿಯಲ್ಲಿ, ಪ್ರತಿಯೊಂದು ವಸ್ತುವಿನಲ್ಲಿ, ಪ್ರತಿಯೊಂದು ಅಣುವಿನಲ್ಲಿ ದೇವನಿದ್ದಾನೆ. ಮಾನವನ ಗುರಿ ಅದನ್ನು ಪ್ರಕಟಗೊಳಿಸುವುದಾಗಿದೆ.

ಅದನ್ನು ಸಾಧಿಸಬೇಕಾದರೆ ಅವನಿಗೆ ತನ್ನೊಳಗಡೆ ಇರುವ ಈ ದೈವೀ ಉಪಸ್ಥಿತಿಯ ಅರಿವಾಗಬೇಕು. ಇದನ್ನು ಸಾಧಿಸಲು ಕೆಲವು ವ್ಯಕ್ತಿಗಳು ಶಿಷ್ಯ ವೃತ್ತಿಗೆ ಒಳಗಾಗಲೇಬೇಕು: ಅವರ ಅಹಂಕಾರಿ ಪುರುಷನು ಅತ್ಯಾಸಕ್ತನೂ, ಅತಿ ನಿಷ್ಠುರನೂ, ಅತಿ ಮಡಿವಂತನೂ, ಸಂಪ್ರದಾಯವಾದಿಯೂ ಆಗಿದ್ದಾನೆ ಮತ್ತು ಅದರ ವಿರುದ್ಧ ಅವರ ಹೋರಾಟಗಳು ದೀರ್ಘ ಮತ್ತು ಯಾತನಾಮಯವಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ ಉಳಿದವರು, ಹೆಚ್ಚು ತಟಸ್ಥವಾಗಿದ್ದವರು, ಹೆಚ್ಚು ಮೃದುವಾಗಿದ್ದವರು, ಹೆಚ್ಚು ಆಧ್ಯಾತ್ಮಿಕವಾಗಿದ್ದವರು ಅವರ ಪುರುಷನ (ಅಸ್ತಿತ್ವದ) ಅಕ್ಷಯವಾದ ದಿವ್ಯ

ಮೂಲದೊಂದಿಗೆ ಸುಲಭವಾಗಿ ಸಂಪರ್ಕಕ್ಕೆ ಬರುತ್ತಾರೆ. ಆದರೂ, ಅವರುಗಳು, ದಿನವೂ ನಿರಂತರವಾಗಿ ತಮ್ಮನ್ನು ತಾವು ಕೂಡ ಅಳವಡಿಕೆಯ ಹಾಗೂ ಒಂದು ಕ್ರಮಬದ್ಧವಾದ ಪ್ರಯತ್ನಕ್ಕೆ ಸಮರ್ಪಿಸಿಕೊಳ್ಳಬೇಕೆನ್ನುವುದನ್ನು ಮರೆಯದಿರೋಣ. ಇದರಿಂದ ಅವರಲ್ಲಿರುವ ಯಾವುದೂ, ಮತ್ತೆಂದಿಗೂ ಆ ಸತ್ಯ ಬೆಳಕಿನ ಪ್ರಭೆಯನ್ನು ಮಬ್ಬುಗೊಳಿಸದಿರಲಿ.

ಆದರೆ, ಒಮ್ಮೆ ನಾವು ಈ ಆಳವಾದ ಅರಿವನ್ನು ಪಡೆದಾದ ಮೇಲೆ, ಹೇಗೆ ನಿಲುವು ಅಸಾಧರಣವಾಗಿ ಬದಲಾಗುತ್ತದೆ! ಹೇಗೆ ತಿಳಿವು ವಿಶಾಲವಾಗುತ್ತದೆ, ಹೇಗೆ ಅನುಕಂಪವು ಹೆಚ್ಚಾಗುತ್ತದೆ!

ಇದರ ಬಗ್ಗೆ ಋಷಿಯೊಬ್ಬರು ಹೀಗೆ ಹೇಳಿದ್ದಾರೆ:

"ಮಾನವ ಜೀವಿಗಳಲ್ಲಿ ಅತ್ಯಂತ ಅಧಮರಾದವರಲ್ಲೂ ನೆಲೆಸಿರುವ ಅಂತಃಪುರುಷನನ್ನು (ಅಂತಃಚೇತನವನ್ನು) ಗ್ರಹಿಸುವ ಘಟ್ಟಕ್ಕೆ ನಾವೆಲ್ಲರೂ ಬರಬೇಕೆಂದು ನಾನು ಬಯಸುತ್ತೇನೆ; ಆತನನ್ನು ನಿಂದಿಸುವ ಬದಲು, ಎದ್ದೇಳು, ಓ ಪ್ರಕಾಶಮಾನವಾದ ಪುರುಷನೆ, ಎಂದಿಗೂ ಶುದ್ಧವಾಗಿರುವ ನೀನು, ಜನ್ಮ–ಮೃತ್ಯುಗಳನ್ನು ತಿಳಿಯದ ನೀನು; ಎದ್ದೇಳು, ದೇವರು ಏಕ, ನಿನ್ನ ಸ್ವರೂಪವನ್ನು ಪ್ರಕಟಿಸು ಎಂದು ನಾನು ಹೇಳ ಬಯಸುತ್ತೇನೆ."

ನಾವು ಈ ಸುಂದರವಾದ ಉಕ್ತಿಯಂತೆ ಜೀವಿಸೋಣ ಮತ್ತು ನಮ್ಮ ಸುತ್ತ–ಮುತ್ತಲೂ ಇರುವ ಎಲ್ಲವೂ ಚಮತ್ಕಾರವೆಂಬಂತೆ ರೂಪಾಂತರ ಹೊಂದುವುದನ್ನು ನಾವು ನೋಡುವೆವು.

ಇದು ಸತ್ಯ–ಪ್ರಜ್ಞೆಯ ಮತ್ತು ಸೂಕ್ಷ್ಮ ದೃಷ್ಟಿಯುಳ್ಳ ಪ್ರೀತಿಯ ನಿಲುವಾಗಿದೆ – ತೋರಿಕೆಗಳ ಹಿಂದೆ ಹೇಗೆ ನೋಡಬೇಕು ಎಂದು ತಿಳಿದಿರುವಂಥ ಪ್ರೀತಿ ಮತ್ತು ಅಂತಃಚೇತನದೊಡನೆ ಯಾವಾಗಲೂ ಸಂಪರ್ಕದಲ್ಲಿರುವಂಥ ಪ್ರೀತಿ.

ನಮ್ಮ ಪ್ರಚೋದನೆಗಳು ಹಾಗೂ ನಮ್ಮ ಕಾಮನೆಗಳು, ನಮ್ಮ ನೋವು ಹಾಗೂ ನಮ್ಮ ಹಾನಿ, ನಮ್ಮ ಯಾತನೆಗಳು ಹಾಗೂ ನಮ್ಮ ಪ್ರಯಾಸಗಳು, ನಮ್ಮ ಅಶಿಸ್ತಿನ ಕಲ್ಪನೆಯಿಂದ ಅನಗತ್ಯವಾಗಿ ನಾಟಕೀಯವಾಗಿಸಲ್ಪಟ್ಟ ಈ ಎಲ್ಲ ಆಂತರಿಕ ಏರಿಳಿತಗಳು ಯಾವ ಮೌಲ್ಯಗಳನ್ನು ಹೊಂದಿವೆ – ಅತ್ಯಂತ ಆಳದಲ್ಲಿರುವ ನಮ್ಮ ಪುರುಷನಿಂದ ನಮ್ಮ ಮೇಲೆ ಬಾಗುವ, ನಮ್ಮ ದುರ್ಬಲತೆಗಳೊಂದಿಗೆ ಸಹಿಸುವ,

ನಮ್ಮ ದೋಷಗಳನ್ನು ಸರಿಪಡಿಸುವ, ನಮ್ಮ ಗಾಯಗಳನ್ನು ಗುಣಪಡಿಸುವ, ತನ್ನ ಪುನಃಶ್ಚೇತನಗೊಳಿಸುವ ಹೊನಲುಗಳಿಂದ ನಮ್ಮ ಅಖಂಡ ಪುರುಷನನ್ನು ತೊಳೆದುಹಾಕುವ ಈ ಶ್ರೇಷ್ಠ, ಈ ಉದಾತ್ತ ಮತ್ತು ದಿವ್ಯ ಪ್ರೇಮದ ಮುಂದೆ ಯಾವ ಮೌಲ್ಯಗಳನ್ನು ಹೊಂದಿವೆ?

ಅಂತರ್ಗತ ದೇವತೆಯು ತಾನಾಗಿ ಎಂದಿಗೂ ಏನನ್ನೂ ವಿಧಿಸುವುದಿಲ್ಲ, ಅವಳು ಏನನ್ನೂ ಕೇಳುವುದಿಲ್ಲ ಅಥವಾ ಹೆದರಿಸುವುದಿಲ್ಲ; ಅವಳು ತನ್ನನ್ನು ತಾನು ನಿವೇದಿಸಿಕೊಳ್ಳುತ್ತಾಳೆ, ಅವಳು ಎಲ್ಲ ಜೀವಿಗಳ ಹೃದಯದಲ್ಲಿ ತನ್ನನ್ನು ತಾನು ಮರೆಮಾಡಿಕೊಳ್ಳುತ್ತಾಳೆ ಮತ್ತು ಮರೆತು ಬಿಡುತ್ತಾಳೆ; ಅವಳು ಎಂದಿಗೂ ಆಪಾದಿಸುವುದಿಲ್ಲ, ಅವಳು ತೀರ್ಮಾನಿಸುವುದಿಲ್ಲ ಅಥವಾ ಕೇಡನ್ನು ಮಾಡುವುದಿಲ್ಲ ಅಥವಾ ನಿಂದಿಸುವುದಿಲ್ಲ, ಆದರೆ ಯಾವುದೇ ನಿರ್ಬಂಧಗಳಿಲ್ಲದೆ ಪರಿಪೂರ್ಣಗೊಳಿಸಲು, ಯಾವುದೇ ಆಕ್ಷೇಪಣೆ ಇಲ್ಲದೆ ತಿದ್ದಲು, ತಾಳ್ಮೆ ಕಳೆದುಕೊಳ್ಳದೆ ಪ್ರೋತ್ಸಾಹಿಸಲು, ತಾನು ಪಡೆದುಕೊಳ್ಳಬಹುದಾದ ಸಂಪತ್ತಿನಿಂದ ಪ್ರತಿಯೊಬ್ಬರನ್ನೂ ಶ್ರೀಮಂತಗೊಳಿಸಲು ಬಿಡುವಿಲ್ಲದೆ ಕಾರ್ಯಮಾಡುತ್ತಾಳೆ; ಅವಳ ಪ್ರೀತಿಯು ಫಲವನ್ನು ನೀಡುವಂಥ ಮತ್ತು ಪೋಷಣೆ ಮಾಡುವಂಥ, ಕಾಪಾಡುವ ಹಾಗೂ ರಕ್ಷಿಸುವಂಥ, ತಿಳಿ ಹೇಳುವ ಹಾಗೂ ಸಾಂತ್ವನ ಹೇಳುವಂಥ ಮಾತೆಯಾಗಿದ್ದಾಳೆ; ಅವಳು ಎಲ್ಲವನ್ನೂ ತಿಳಿದವಳಾಗಿದ್ದರಿಂದ ಎಲ್ಲವನ್ನೂ ಸೈರಿಸಿಕೊಳ್ಳುತ್ತಾಳೆ, ಕ್ಷಮಿಸುತ್ತಾಳೆ ಮತ್ತು ಎಲ್ಲವನ್ನೂ ಮನ್ನಿಸುತ್ತಾಳೆ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/40–42 – ಶ್ರೀಮಾತೆ**

## ಆಂತರಿಕ ಸಾನಿಧ್ಯದ ಅರಿವುಳ್ಳವರಾಗಿ

ನಾನು ಯಾವಾಗಳು ನಿಮ್ಮೊಂದಿಗಿದ್ದೇನೆ, ಆಂತರಿಕ ಸಾನಿಧ್ಯದ ಅರಿವುಳ್ಳವರಾಗುವುದು ಸಾಧನೆಯ ಮಹತ್ವದ ಅಂಶಗಳಲ್ಲಿ ಒಂದಾಗಿದೆ. ಅವನನ್ನು ಕೇಳು (ಕೆ ನನ್ನು), ಸಾನಿಧ್ಯವು ನಂಬಿಕೆಯ ವಿಷಯವಲ್ಲ ಅಥವಾ ಮಾನಸ ಕಲ್ಪನೆಯಲ್ಲ, ಅದೊಂದು ವಾಸ್ತವವಾಗಿದೆ, ನಿರ್ದಿಷ್ಟವಾಗಿದೆ ಮತ್ತು ಅತ್ಯಂತ ಭೌತಿಕ ವಿದ್ಯಮಾನದ ಹಾಗೆ ಅರಿವಿಗೆ ನೈಜ ಹಾಗೂ ಮೂರ್ತವಾಗಿದೆ ಎಂದು ಅವನು ಹೇಳುತ್ತಾನೆ.

*

*ಪ್ರ: ಪ್ರೀತಿಯ ಮಾತೆಯವರೆ, ದಿವ್ಯ ಸನ್ನಿಧಿಯು ಯಾವಾಗಲೂ ಮತ್ತು ಎಲ್ಲೆಲ್ಲೂ ಇದೆ ಎಂದು ಅನುಭವಿಸುವ ಹಾಗೆ ಮಾಡುವ ಆ ಪ್ರೇಮದ ಮೂಲವನ್ನು ನಾನು ಹೇಗೆ ಕಂಡುಕೊಳ್ಳಲಿ.*

ಮೊದಲು ಅಂತರಂಗ ಪ್ರವೇಶದಿಂದ ಮತ್ತು ಏಕಾಗ್ರತೆಯಿಂದ ನಿಮ್ಮಲ್ಲಿ ದೇವನನ್ನು ಕಂಡುಕೊಳ್ಳಬೇಕು ಅಥವಾ ಪ್ರೇಮದಿಂದ ಮತ್ತು ಸಮರ್ಪಣಾ ಭಾವದ ಮುಖಾಂತರ ಶ್ರೀ ಅರವಿಂದರಲ್ಲಿ ಮತ್ತು ನನ್ನಲ್ಲಿ ದೇವನನ್ನು ಕಂಡುಕೊಳ್ಳಬೇಕು. ಒಂದೊಮ್ಮೆ ನೀವು ನಿಮ್ಮಲ್ಲಿ ದೇವನನ್ನು ಕಂಡುಕೊಂಡರೆ, ಸ್ವಾಭಾವಿಕವಾಗಿ ಅವನನ್ನು ಎಲ್ಲ ವಸ್ತುಗಳಲ್ಲೂ ಮತ್ತು ಎಲ್ಲೆಲ್ಲೂ ಕಾಣಬಹುದು.

*

ದೇವರೊಂದಿಗೆ ಒಂದಾಗಲು ಎರಡು ಮಾರ್ಗಗಳಿವೆ. ಒಂದು – ಹೃದಯದಲ್ಲಿ ಧ್ಯಾನಿಸುವುದು ಮತ್ತು ಅಲ್ಲಿ ಅವನ ಇರುವಿಕೆಯನ್ನು ಕಂಡುಕೊಳ್ಳಲು ಸಾಕಷ್ಟು ಆಳಕ್ಕೆ ಹೋಗುವುದು; ಮತ್ತೊಂದು – ತಾಯಿಯ ತೆಕ್ಕೆಯಲ್ಲಿ ಬೆಚ್ಚಗೆ ಮಲಗಿದ ಒಂದು ಮಗುವಿನಂತೆ ನಾವಿರಲು, ಸಂಪೂರ್ಣ ಸಮರ್ಪಣೆಯೊಂದಿಗೆ ನಮ್ಮನ್ನು ನಾವು ಅವನ ತೋಳಿನಲ್ಲಿ ಹಾಕಿಕೊಳ್ಳುವುದು; ಇವೆರಡು ಮಾರ್ಗಗಳಲ್ಲಿ, ಎರಡನೆಯದು ಸುಲಭವೆಂದು ನನಗೆ ತೋರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/160–61**

*ಪ್ರ: ಪ್ರೀತಿಯ ಮಾತೆಯವರೆ, ಇಡೀ ದಿನ "ಮಾನವನ ಉತ್ಸಾಹಗಳು/ಹಸಿವುಗಳು (ಭಾವೋದ್ರೇಕಗಳು) ದೇವರಿಗಾಗಿ ಪ್ರೇಮವಾಗಿ ಬದಲಾದುದನ್ನು" ಸೂಚಿಸುವ ಕೆಂಪು ಗುಲಾಬಿಯ ಬಗ್ಗೆ ಬಿಟ್ಟು ಮತ್ತೇನನ್ನೂ ನಾನು ಯೋಚಿಸಲಿಲ್ಲ. ಮಾನವನ ಉತ್ಸಾಹಗಳು ಅಥವಾ ಭಾವೋದ್ರೇಕಗಳು ಎಂದರೇನು ಎನ್ನುವುದನ್ನು ನಾನು ನಿಖರವಾಗಿ ತಿಳಿದುಕೊಳ್ಳಬೇಕಾಗಿದೆ.*

ಒಬ್ಬ ಮನುಷ್ಯನನ್ನು ತಮ್ಮ ವಶಕ್ಕೆ ತೆಗೆದುಕೊಂಡು, ಕೊನೆಗೆ ಅವನ ಜೀವನದ ಮೇಲೆ ಅಧಿಕಾರ ನಡೆಸುವ ಎಲ್ಲ ಭಯಂಕರವಾದ ಬಯಕೆಗಳನ್ನು "ಹಸಿವು ಅಥವಾ ಭಾವೋದ್ರೇಕ" ಎಂದು ಕರೆಯುತ್ತೇವೆ – ಕುಡುಕನಿಗೆ ಕುಡಿಯುವದೆಂದರೆ ಉತ್ಸಾಹ, ವ್ಯಭಿಚಾರಿಗೆ ಹೆಣ್ಣೆಂದರೆ ಉದ್ವೇಗ, ಜೂಜುಕೋರನಿಗೆ ಪಗಡೆಯಾಟದ ಹುಚ್ಚು, ಇತ್ಯಾದಿ. ಒಬ್ಬ ಮನುಷ್ಯ ಜೀವಿಯು ಇನ್ನೊಂದರ ಬಗ್ಗೆ ಭಯಂಕರವಾದ

ಮತ್ತು ನಿಯಂತ್ರಿಸಲಾಗದ ಮೋಹವನ್ನು ಹೊಂದಿದ್ದರೆ ಅದನ್ನು ಉನ್ಮಾದ, ಉದ್ವೇಗ, ಹಸಿವು ಎಂದು ಕರೆಯಲಾಗುತ್ತದೆ; ಮನುಷ್ಯರು, ಒಬ್ಬರಿಗೊಬ್ಬರು ಅನುಭವಿಸುವಂಥ ಈ ಭಾವಪೂರ್ಣವಾದ ಪ್ರೀತಿಯನ್ನು ದೇವ–ಪ್ರೀತಿಯಲ್ಲಿ ಬದಲಾಯಿಸಲೇಬೇಕಾಗಿದೆ.

*

ನೀನು ಹೆಚ್ಚು ಕುಗ್ಗಿದ ಹಾಗೆ ಮತ್ತು ಹೆಚ್ಚು ದುಃಖಿಸಿದ ಹಾಗೆ ನನ್ನಿಂದ ಹೆಚ್ಚು ದೂರ ಹೋಗುವೆ. ದೇವರು ದುಃಖಿತನಲ್ಲ, ಮತ್ತು ಅವನನ್ನು ನೀನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕಾದರೆ, ನೀನು ನಿನ್ನಿಂದ ಎಲ್ಲ ದುಃಖವನ್ನು ಮತ್ತು ಎಲ್ಲ ಭಾವನಾತ್ಮಕ ದೌರ್ಬಲ್ಯಗಳನ್ನು ತಿರಸ್ಕರಿಸಬೇಕು.

*

ದುಃಖಿಸಬೇಡ. ಯಾವಾಗಲೂ ಒಂದೇ ಯುದ್ಧವನ್ನು ಹಲವಾರು ಬಾರಿ ಗೆಲ್ಲಬೇಕಾಗುತ್ತದೆ – ವಿಶೇಷವಾಗಿ ಹೋರಾಟವು ದುಷ್ಟ ಶಕ್ತಿಗಳೊಂದಿಗೆ ಇದ್ದಾಗ. ಆದ್ದರಿಂದ ನಾವು ತಾಳ್ಮೆಯೊಂದಿಗೆ ಸನ್ನದ್ಧರಾಗಿರಬೇಕು ಮತ್ತು ಅಂತಿಮ ಗೆಲುವಿನಲ್ಲಿ ನಂಬಿಕೆ ಇಡಬೇಕು.

*

*ಪ್ರ: ಕಾರಣವು ಏನೇ ಇರಲಿ, ನನ್ನ ಅರಿವು ನಿಮ್ಮನ್ನು ಕಳೆದುಕೊಂಡ ಕ್ಷಣವೇ ನಾನು ದುಃಖಿತನಾಗುತ್ತೇನೆ ಮತ್ತು ಶಕ್ತಿಹೀನನಾಗುತ್ತೇನೆ.*

ಯಾವುದೇ ಕ್ಷಣಕ್ಕೂ ನಾನು ನಿನ್ನನ್ನು ಮರೆಯುವುದಿಲ್ಲ (ನೀನು ಮರೆತರೂ). ನನ್ನ ಮತ್ತು ನಿನ್ನ ನಡುವೆ ಬೇರೆಯ ಅನೇಕ ಪ್ರಭಾವಗಳು ಬರಲು ಯಾಕೆ ಅವಕಾಶ ಮಾಡಿ ಕೊಡುತ್ತೀ?

*

*ಪ್ರ: ಶ್ರೀಮಾತೆಯವರೆ, ನಿಮ್ಮ ಇರುವಿಕೆಯನ್ನು ಸದಾ ನನ್ನ ಸಾಮಿಪ್ಯದಲ್ಲಿ ಅನುಭವಿಸಲು ತೊಂದರೆಯು ಏಕಾಗುತ್ತದೆ? ನನ್ನ ಹೃದಯಂತರಾಳದಲ್ಲಿ ನೀವು ಇರದೇ ಇದ್ದರೆ ನನ್ನ ಜೀವನದಲ್ಲಿ ಯಾವುದೇ ಅರ್ಥವಿಲ್ಲವೆಂದು ನನಗೆ ಚನ್ನಾಗಿ ತಿಳಿದಿದೆ. ಆದರೂ, ಯಾವುದೇ ಅವಕಾಶ ಸಿಕ್ಕರೂ ನನ್ನ ಮನಸ್ಸು ಆ ಕಡೆ – ಈ ಕಡೆ ಚಲಿಸುತ್ತದೆ.*

*

ಹೀಗಾಗುವುದರಿಂದ ನೀನು ನನ್ನ ಇರುವಿಕೆಯ ಅನುಭವವನ್ನು ಕಳೆದುಕೊಳ್ಳುವಿ.

*

ನಿನ್ನಲ್ಲಿ ಶೂನ್ಯತೆಯನ್ನು ನಿರ್ಮಿಸಿಕೊಳ್ಳಬೇಕೆಂದಿರುವ ನೀನು ಸರಿ; ಅಂತರಂಗದ ಈ ಶೂನ್ಯತೆಯಲ್ಲಿ ದೇವನಿರುವುದನ್ನು ನೀನು ಶೀಘ್ರದಲ್ಲಿಯೇ ಮನಗಾಣುವಿ.

*

ನಾವೇನು ಮಾಡುತ್ತೇವೆ ಎನ್ನುವುದರ ಮೇಲೆ ಯೋಗ ಜೀವನವು ಅವಲಂಬಿಸಿರುವುದಿಲ್ಲ, ಆದರೆ ನಾವು ಹೇಗೆ ಮಾಡುತ್ತೇವೆ ಎನ್ನುವುದರ ಮೇಲೆ ಅವಲಂಬಿಸಿದೆ; ಅಂದರೆ, ಕಾರ್ಯಕ್ಕಿಂತ ನಮ್ಮ ಮನೋಭಾವವು ಮತ್ತು ನಾವು ಕಾರ್ಯಮಾಡುವ ಸ್ಫೂರ್ತಿಯು ಹೆಚ್ಚು ಗಣನೆಗೆ ಬರುತ್ತದೆ.

*

> *ಪ್ರ: ಪ್ರೀತಿಯ ಮಾತೆಯವರೆ, ನಾನು ನಿಮ್ಮನ್ನು ಆರಾಧಿಸುವುದಿಲ್ಲ ಮತ್ತು ನಿಮಗೆ ಸಂಬಂಧಿಸಿಲ್ಲವೆಂದು ನಾನು ಹೇಳುವುದಿಲ್ಲ, ಅದನ್ನು ನಾನು ನನ್ನ ಕೃತಿಗಳಲ್ಲಿ ನಿರೂಪಿಸಬೇಕಿದೆ; ಅದಿಲ್ಲದೆ, ಇವುಗಳೆಲ್ಲವೂ ನಿಷ್ಪ್ರಯೋಜಕ ಶಬ್ದಗಳು. ಎಷ್ಟೇ ಆದರೂ ನಾನು ನಿಮ್ಮ ಮಗು.*

ಭೇಷ್. ನೀನು ಯಾವಾಗಲೂ ನನ್ನ ಮಗುವಾಗಿರುವೆ ಮತ್ತು “ನಾನು ನಿಮ್ಮನ್ನು ಆರಾಧಿಸುತ್ತೇನೆ ಮತ್ತು ನಾನು ನಿಮ್ಮವ” ಎಂದು ಪ್ರಾಮಾಣಿಕವಾಗಿ ಹಾಗೂ ಸತ್ಯವಾಗಿ ಹೇಳುವ ಇನ್ನೂ ಉತ್ತಮ ಮಗುವಾಗಬೇಕೆಂದು ನಾನು ನಿರೀಕ್ಷಿಸುತ್ತೇನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/159, 159–184 - ಶ್ರೀಮಾತೆ**

ನಾವು ಕೋರುವ ದೇವರು ಬಹು ದೂರದ ಮತ್ತು ಎಟುಕಲಾರದ ಸಂಗತಿಯಲ್ಲ. ಅವನು ತನ್ನ ಸ್ವಂತ ರಚನೆಯ ಹೃದಯದಲ್ಲಿದ್ದಾನೆ ಮತ್ತು ನಾವು ಅವನನ್ನು ಕಂಡುಕೊಳ್ಳಬೇಕೆಂದು ಹಾಗೂ ನಮ್ಮ ವ್ಯಕ್ತಿಗತ ಪರಿರ್ತನೆಯಿಂದ ಅವನನ್ನು ಅರಿತುಕೊಳ್ಳುವ, ಅವನೊಂದಿಗೆ ಒಂದಾಗುವ ಸಾಮರ್ಥ್ಯವನ್ನು ಹೊಂದಬೇಕೆಂದು ಮತ್ತು ಕೊನೆಯಲ್ಲಿ ಅವನನ್ನು ಪ್ರಜ್ಞಾಪೂರ್ವಕವಾಗಿ ಅಭಿವ್ಯಕ್ತಗೊಳಿಸಬೇಕೆಂದು ಅವನು ಬಯಸುತ್ತಾನೆ. ಇದಕ್ಕೇ ನಮ್ಮನ್ನು ನಾವು ಮೀಸಲಿಟ್ಟುಕೊಳ್ಳಬೇಕು, ನಮ್ಮ ಇರುವಿಕೆಗೆ ಇದುವೇ ನಿಜವಾದ ಕಾರಣ.

ಶ್ರೀಮಾತೆಯವರಿಗೆ ತಮ್ಮನ್ನು ತಾವು ಅರ್ಪಿಸಿಕೊಂಡವರು, ತಮ್ಮ ಅಂತರಾಳದಲ್ಲಿ ಅವರಿಗೆ ಹತ್ತಿರವಿರುವವರು ಅವರ ಮಕ್ಕಳು. ಬರೀ ಭೌತಿಕ ದೇಹದೊಂದಿಗೆ ಅವರ ಹತ್ತಿರ ಬರುವವರು ಶ್ರೀಮಾತೆಯರೊಂದಿಗೆ ಇರುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/347 - ಶ್ರೀಮಾತೆ**

## ಆಧ್ಯಾತ್ಮಿಕ ಮತ್ತು ಚೈತ್ಯಾತ್ಮದ ಮಾತೃಸ್ವರೂಪ

**– ಅನುವಾದ: ನಾಗಜ್ಯೋತಿ ಮಾನವಿ**

ನೀವು ಶ್ರೀಮಾತೆಯವರ ಮಗು ಮತ್ತು ಶ್ರೀಮಾತೆಯು ತನ್ನ ಮಕ್ಕಳನ್ನು ಯಾವುದೇ ಸೀಮಿತತೆ ಇಲ್ಲದೆ ಪ್ರೀತಿಸುತ್ತಾಳೆ. ಮತ್ತು ಅವರ ಪ್ರಕೃತಿಯ ನ್ಯೂನ್ಯತೆಗಳನ್ನು ಆಕೆ ತಾಳ್ಮೆಯಿಂದ ಸಹಿಸಿಕೊಳ್ಳುತ್ತಾಳೆ. ಶ್ರೀಮಾತೆಯವರ ನಿಜವಾದ ಮಗುವಾಗಲು ಪ್ರಯತ್ನಿಸಿ; ಅದು ನಿಮ್ಮೊಳಗೆ ಇದೆ, ಆದರೆ ನಿಮ್ಮ ಬಾಹ್ಯ ಮನವು ಚಿಕ್ಕ ನಿರರ್ಥಕ ವಸ್ತುಗಳಿಂದ ಆವರಿಸಲ್ಪಟ್ಟಿರುತ್ತದೆ. ಮತ್ತು ಅವುಗಳ ಬಗ್ಗೆ ಹಿಂಸಾತ್ಮಕ, ರೀತಿಯಲ್ಲಿ ಆಗಾಗ್ಗೆ ಪ್ರಧಾನ್ಯತೆ ನೀಡುತ್ತದೆ. ನೀವು ಶ್ರೀಮಾತೆಯವರನ್ನು ಕೇವಲ ಕನಸಿನಲ್ಲಿ ಮಾತ್ರ ನೋಡುವುದಲ್ಲದೆ ಎಲ್ಲಾ ಸಮಯದಲ್ಲಿ ನಿಮ್ಮ ಜೊತೆಗೆ ಮತ್ತು ನಿಮ್ಮೊಳಗೆ ಆಕೆಯನ್ನು ನೋಡುವುದು ಮತ್ತು ಭಾವಿಸುವುದನ್ನು ಕಲಿಯಿರಿ. ಆಗ ನಿಮ್ಮನ್ನು ನಿಯಂತ್ರಿಸುವದು ಮತ್ತು ಬದಲಾಯಿಸುವುದು ಸುಲಭವೆಂಬುದನ್ನು ಕಂಡುಕೊಳ್ಳುತ್ತೀರಿ – ಏಕೆಂದರೆ ಆಕೆ ಅಲ್ಲಿದ್ದುಕೊಂಡು ನಿಮಗಾಗಿ ಆ ಕಾರ್ಯವನ್ನು ಮಾಡಲು ಸಹಾಯ ಮಾಡುತ್ತಾಳೆ.

**SABCL (ಶ್ರೀ ಅರವಿಂದೋ ಜನ್ಮ ಶತಾಬ್ದಿ ಸಂಪುಟ) 25/174**

ನೀನು ನನಗೆ ಬರೆದ ಪತ್ರಗಳು ಸರಳವಾದ ವಿಶಿಷ್ಟ ಲಕ್ಷಣಗಳು ಮತ್ತು ಸುಲಭವಾದ ಸತ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿನ ಅಸಮರ್ಥತೆಯನ್ನು ತೋರಿಸುತ್ತವೆ. ಯಾರು ‘x’ ರವರ ಭೌತಿಕ ದೇಹಕ್ಕೆ ಜನ್ಮವನ್ನು ನೀಡುವ ಉಪಕರಣವಾಗಿದ್ದರೋ ಅವರು ನಿಸ್ಸಂದೇಹವಾಗಿ ಆಕೆಯ ಜೀವಮಾನದ ಭೌತಿಕ ತಾಯಿಯಾಗಿದ್ದಳು. ಆದರೆ ‘x’ ಮತ್ತು ಶ್ರೀಮಾತೆಯವರ ನಡುವೆ ಇರುವ ಸಂಬಂಧವು (ಶ್ರೀಮಾತೆ ಮತ್ತು ಅವರನ್ನು ಒಪ್ಪಿಕೊಂಡ ಎಲ್ಲರ ನಡುವಿನ ಸಂಬಂಧ) ಚೈತ್ಯ ಪುರುಷನ ಮತ್ತು ಆಧ್ಯಾತ್ಮಿಕ ತಾಯ್ತನವಾಗಿದೆ. ಇದು ಭೌತಿಕ

ತಾಯಿಯು ಮತ್ತು ತನ್ನ ಮಗುವಿನ ನಡುವಿನ ಸಂಬಂಧಕ್ಕಿಂತ ಅತೀ ಶ್ರೇಷ್ಠವಾಗಿದೆ; ಇದು ಮಾನವ ತಾಯ್ತನ ನೀಡುವುದನ್ನೆಲ್ಲಾ ನೀಡುತ್ತದೆ ಆದರೆ ಹೆಚ್ಚಿನ ಉನ್ನತ ರೀತಿಯಲ್ಲಿ, ಮತ್ತು ಇದು ತನ್ನೊಳಗೆ ತಾನು ಅನಂತವಾಗಿ ಹೆಚ್ಚಿನದನ್ನು ಹೊಂದಿರುತ್ತದೆ. ಏಕೆಂದರೆ ಇದು ಶ್ರೇಷ್ಠವಾದ ಮತ್ತು ಹೆಚ್ಚು ಪರಿಪೂರ್ಣವಾದುದಾಗಿದೆ. ಮತ್ತು ಭೌತಿಕ ಸಂಬಂಧ ಎಲ್ಲವನ್ನೂ ತೆಗೆದುಕೊಂಡು ಅಂತರಂಗದ ಮತ್ತು ಬಹಿರಂಗದ ಜೀವನವನ್ನು ಬದಲಾಯಿಸುತ್ತದೆ. ಯಾರಿಗೆ ಸಾಮಾನ್ಯ ಪ್ರಜ್ಞೆಯಿದೆಯೋ ಮತ್ತು ನೇರವಾದ ಬುದ್ಧಿಯಿದೆಯೋ ಅವರು ಗೊಂದಲಕ್ಕೊಳಗಾಗುವಂತಹುದು ಇಲ್ಲಿ ಏನೂ ಇಲ್ಲ. ಭೌತಿಕ ತಾಯ್ತನವೂ ಯಾವುದೇ ರೀತಿಯಲ್ಲಿ ಅಂತರಾತ್ಮನ ಮತ್ತು ಆಧ್ಯಾತ್ಮಿಕ ತಾಯ್ತನವನ್ನು ಒಪ್ಪಿಕೊಳ್ಳುವಲ್ಲಿ ಅಡಚಣೆಯಾಗುವ ಯಾವುದೇ ಸಾಧ್ಯತೆಯಿಲ್ಲ. ಈಕೆಯೇ ನನ್ನ ನಿಜವಾದ ತಾಯಿಯೆಂದು ಹೇಳುವುದು ಪರಿಪೂರ್ಣವಾಗಿ ಸರಿಯಾಗಿದೆ. ಏಕೆಂದರೆ ಆಕೆ ಆತನಿಗೆ ಅಂತರಂಗದಲ್ಲಿ ಹೊಸ ಜನ್ಮವನ್ನು ನೀಡಿದ್ದಾಳೆ. ಮತ್ತು ಒಂದು ಹೊಸ ದೈವೀ ಅಸ್ತಿತ್ವವನ್ನು ಅವನಿಗಾಗಿ ಸೃಷ್ಟಿ ಮಾಡುತ್ತಿದ್ದಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/108 – ಶ್ರೀ ಅರವಿಂದರು**

## ನಿಜವಾದ ಮಗುವಾಗಿರಿ

*ಸಾಧಕ: ನಿನ್ನೆಯ ನನ್ನ ವರ್ತನೆಯ ಬಗ್ಗೆ ನಾನು ಮರುಗುತ್ತಿದ್ದೇನೆ. ಅದಕ್ಕಾಗಿ ನಾನು ಕ್ಷಮೆಯಾಚಿಸಲೇ?*
*ನಾನು ನಿಮ್ಮ ನಿಜವಾದ ಸೇವಕನಾಗಲು ಬಯಸುತ್ತೇನೆ.*

ನೀನು ಈಗಾಗಲೇ ನಿಜವಾದ ಸೇವಕನಿದ್ದೀಯ ಎಂದು ಪರಿಗಣಿಸಿದ್ದೇನೆ. ಆದರೆ ನೀನೂ ಸಹ ನಿಜವಾದ ಮಗುವಾಗಲೆಂದು ನಾನು ಬಯಸುತ್ತೇನೆ. ಆದ್ದರಿಂದ ಅದರ ಸಂಪೂರ್ಣ ಖುಷಿಯನ್ನು ನೀನು ಹೊಂದಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/209–10**

*

*ಸಾಧಕ: ನಂತರ, ನನ್ನ ಇಡೀ ಜೀವನವೇ 'ನಿನಗಾಗಿ' ಮೀಸಲಿರಿಸಲಾಗಿದೆ; ನನಗೇನಾಗುತ್ತದೆ ಎಂಬುದರ ಬಗ್ಗೆ ತೊಂದರೆಪಡಲಾರದೆ ಬಹಳ ಶಾಂತಿಯಿಂದ ಇರಬಲ್ಲೆ.*

ಅದು ಬಹಳ ಒಳ್ಳೆಯದು, ಆದರೆ ನನಗೆ ನಿನ್ನ ಬಗ್ಗೆ ಗೊತ್ತಿದೆ ಮತ್ತು ನೀನು ನಿನ್ನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ, ನಿನಗೇನು ಒಳ್ಳೆಯದು ಎಂದು ನಿನಗಿಂತ ಉತ್ತಮವಾಗಿ ನನಗೆ ಗೊತ್ತಿದೆ ಎಂಬುದನ್ನು ತಿಳಿದುಕೊಂಡರೆ, ಅದು ಪರಿಪೂರ್ಣವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/168 – ಶ್ರೀಮಾತೆ**

## ಗೊಂದಲದಲ್ಲಿರುವ ಸಾಧಕನಿಗೆ ಶ್ರೀಮಾತೆಯವರ ಮಾಗದರ್ಶನ

*ಪ್ರಶ್ನೆ: ನನ್ನ ಪ್ರಜ್ಞೆಯು ಮುಚ್ಚಲ್ಪಟ್ಟಿದೆ. ನಾನು ನಿನ್ನ ಮಗುವೆ?*

ನಿನ್ನ ಅಂತರಾತ್ಮವು ನಿಜವಾಗಿ ನನ್ನ ಮಗುವೇ ಆಗಿದೆ. ಈ ವಿಷಯ ಚೈತ್ಯ ಪುರುಷನಿಗೂ ಗೊತ್ತಿದೆ.

*ಪ್ರಶ್ನೆ: ಈ ಕತ್ತಲೆ ಮತ್ತು ನೋವಿನಿಂದ ಕೂಡಿದ ಕಂದಕದಲ್ಲಿ ನಾನು ಇನ್ನೆಷ್ಟು ದಿನ ದುಃಖದಿಂದ ಬಳಲಲಿ? ನಾನು ನಿಮ್ಮ ಮಗುವಾಗಲು ಸಾಧ್ಯವಿಲ್ಲವೆಂದು ನನಗೆ ಬಹಳ ಬೇಜಾರಾಗಿದೆ.*

ನೀನು ಯಾವ ಅರ್ಥದಲ್ಲಿ ಹೇಳುತ್ತಿರುವೆ ಎಂದು ನನಗೆ ತಿಳಿಯುತ್ತಿಲ್ಲ; ನಾನು ನಿನಗೆ ಎಂದೂ ಹೇಳಿಲ್ಲ. ತದ್ವಿರುದ್ಧವಾಗಿ ನಾನು ನಿನಗೆ ಹೇಳಿದ್ದೆ. ನಿನ್ನ ಚೈತನ್ಯ ಪುರುಷವು ನನ್ನ ಮಗುವೆಂದು ಮತ್ತು ಯಾವಾಗ ನೀನು ನಿನ್ನ ಚೈತನ್ಯ ಪುರುಷನ ಬಗ್ಗೆ ಪೂರ್ಣವಾಗಿ ಪ್ರಜ್ಞಾಯುತವಾಗುತ್ತೀಯೋ ಆಗ ನೀನು ನನ್ನ ಮಗುವೆಂಬುದರ ಪ್ರಜ್ಞೆಯೂ ಸಹ ಬರುವುದು.

*ಪ್ರಶ್ನೆ : ನಾನು ದುಃಖಿತನಾಗಿದ್ದೇನೆ. ಏಕೆಂದರೆ ನಾನು ನಿಮ್ಮ ಮಗುವಾಗಲು ಮತ್ತು ವಿಧೇಯ ಸೇವಕನಾಗಲು ಸಾಧ್ಯವಾಗುತ್ತಿಲ್ಲ. ಆದರೆ ಅದೇ ಕಾರಣಕ್ಕಾಗಿ ನಾನಿಲ್ಲಿದ್ದೇನೆ.*

ಇದನ್ನು ನಾನು ಸ್ಪಷ್ಟವಾಗಿ ಅರಿತಿರುವೆ. ಮತ್ತು ನಾನು ಪುನಃ ಹೇಳುತ್ತೇನೆ (ನಿನ್ನ ಸ್ವಂತ ಇಚ್ಛೆಯನ್ನು ಹೊರತುಪಡಿಸಿ) ನನ್ನ ಮಗುವಾಗಲು ಮತ್ತು ವಿಧೇಯ ಸೇವಕನಾಗಲು ಯಾವುದೂ ಅಡ್ಡಿಯಾಗಲಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/113–14 – ಶ್ರೀಮಾತೆ**

## ಮಗುವಿನಂತಹ ಮನಸ್ಸು

*ಪ್ರಶ್ನೆ: ಮಗುವಿನಂತಾಗುವುದು ಅಂದರೆ ಏನು?*

ಮಗುವಿನಲ್ಲಿ ಅದರ ಅಂತರಾತ್ಮವು ಮಾನಸಿಕ ಪರದೆಯಿಂದ ಮುಚ್ಚಲ್ಪಟ್ಟಿರುವುದಿಲ್ಲ. ಹೀಗಾಗಿ ಅದು ಹೆಚ್ಚಿನ ಬೆಳವಣಿಗೆಯ ಸಾಧ್ಯತೆಯನ್ನು ಮತ್ತು ಪ್ರಗತಿಗಾಗಿ ಹೆಚ್ಚಿನ ನಮ್ಯತೆಯನ್ನು ಹೊಂದಿರುತ್ತದೆ.

*ಪ್ರಶ್ನೆ: ಈ ಯೋಗ ಮಾರ್ಗದಲ್ಲಿ ಮಗುವಿನ ಮಾರ್ಗವನ್ನು ತೆಗೆದುಕೊಳ್ಳುವುದರ ಬಗ್ಗೆ ನಾನು ತಿಳಿಯಬಯಸುತ್ತೇನೆ.*

ಮಗುವಿನ ರೀತಿಯ ಹಾದಿಯೆಂದರೆ ಪ್ರಶ್ನೆಸಿಲಾರದ ನಂಬಿಕೆ, ಸಂಪೂರ್ಣ ಅವಲಂಬನೆ, ಮುಕ್ತ ಮನಸ್ಸಿನ ಸಮರ್ಪಣೆಯಿಂದ ಕೂಡಿರುತ್ತದೆ.

*ಪ್ರಶ್ನೆ: ನಾನು ಮಗುವಿನ ರೀತಿಯ ಹಾದಿಯಲ್ಲಿ ನಡೆಯುವುದು ನನಗೆ ಒಳ್ಳೆಯದೆಂದು ನಿಮಗನಿಸುತ್ತಿದೆಯೇ?*

ಮಗುವಿನ ರೀತಿಯ ಮಾರ್ಗವು ಯಾವಾಗಲೂ ಉತ್ತಮವಾದುದು – ಆದರೆ ಇದು ಅಷ್ಟು ಸುಲಭವಾದುದಲ್ಲ, ಈ ಮಾರ್ಗವನ್ನು ಸಹಜವಾಗಿ ಮತ್ತು ಸಂಪೂರ್ಣ ಪ್ರಾಮಾಣಿಕತೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 121 – ಶ್ರೀಮಾತೆ**

## ಮಗುವಿನಂತಹ ನಂಬಿಕೆ

ಮಗುವಿನ ತರಹದ ನಂಬಿಕೆಯು ಅತಿಮುಖ್ಯವಾದುದು, ನನಗೇನು ಬೇಕು ಅದು ಬಂದೇ ಬರುತ್ತದೆ ಎಂಬ ಬಿಚ್ಚು ಮನಸ್ಸಿನ ನಂಬಿಕೆ, ಅದರ ಬಗ್ಗೆ ತನಗೆ ತಾನು ಎಂದೂ ಪ್ರಶ್ನಿಸುವುದಿಲ್ಲ: ನನಗೆ ಅವಶ್ಯಕವಿದೆ ಅದು ಸಿಕ್ಕೇ ಸಿಗುತ್ತದೆಯೆಂಬ ಭರವಸೆ. ಈ ತರಹದ ನಂಬಿಕೆ; ಇದು ಅವಶ್ಯಕವಾಗಿ ಅತೀ ಮುಖ್ಯವಾದು ಸ್ಥಿತಿಯಾಗಿದೆ.

ಅಭೀಪ್ಸೆಪಡುವುದು ಅತ್ಯವಶ್ಯಕವಾಗಿದೆ. ಆದರೆ ಕೆಲ ಜನರು ಶ್ರದ್ಧೆ ಮತ್ತು ಶ್ರದ್ಧೆಯ ಕೊರತೆ, ನಂಬಿಕೆ ಮತ್ತು ಅಪನಂಬಿಕೆಯ ದ್ವಂದ್ವವನ್ನು ತಮ್ಮೊಳಗೆರಿಸಿಕೊಂಡು ಅಭೀಪ್ಸೆ ಪಡುತ್ತಾರೆ, ಗೆಲ್ಲುತ್ತೇವೆ ಎಂಬ ಧನಾತ್ಮಕ ಭಾವ

ಮತ್ತು ದುರಂತ ಬಂದಾಗ ತಾನಾಗಿಯೇ ಕೇಳುವ ಋಣಾತ್ಮಕ ಭಾವದಿಂದ ಅಭೀಪ್ಸೆಪಡುತ್ತಾರೆ...

ಯಾವಾಗ ನಾವು 'ಶಕ್ತಿ'ಗಾಗಿ ಅಭೀಪ್ಸೆಪಡುತ್ತೇವೋ ಯಾವಾಗ ನಾವು ಸಹಾಯಕ್ಕಾಗಿ ದೈವವನ್ನು ಕೇಳುತ್ತೇವೆಯೋ, ಆ ಸಹಾಯ ಬರುತ್ತದೆ ಎಂಬ ದೃಢವಾದ ಖಚಿತತೆಯಿಂದ ಕೇಳಿದರೆ, ಖಂಡಿತವಾಗಿಯೂ ಸಹಾಯ ಬರದೇ ಇರುವುದು ಅಸಾಧ್ಯವಾಗಿದೆ. ಹೌದು, ಇದು ಈ ರೀತಿಯದು.. ಇದು ನಿಜವಾಗಿಯೂ ಅಂತರಂಗದ ತೆರೆದುಕೊಳ್ಳುವಿಕೆ, ವಿಶ್ವಾಸಾರ್ಹವಾದುದಾಗಿದೆ. ಮತ್ತು ಕೆಲಜನರು ಸತತವಾಗಿ ಈ ಸ್ಥಿತಿಯಲ್ಲಿರುತ್ತಾರೆ, ಯಾವಾಗ ಏನಾದರೂ ಸ್ವೀಕರಿಸುವುದಿದ್ದರೆ ಅವರು ಯಾವಾಗಲೂ ಸ್ವೀಕರಿಸಲು ಸಿದ್ಧರಿರುತ್ತಾರೆ..

ನಮ್ಮಲ್ಲಿ ನಂಬಿಕೆಯಿಲ್ಲದ್ದರೆ, ಸಹಜವಾದ , ಬಿಚ್ಚುಮನಸ್ಸಿನ, ಪ್ರಶನಾತೀತ ನಂಬಿಕೆಯಿದ್ದರೆ, ಇದು ಎಲ್ಲಕ್ಕಿಂತಲೂ ಉತ್ತಮವಾಗಿ ಕೆಲಸ ಮಾಡುತ್ತದೆ. ಮತ್ತು ಫಲಿತಾಂಶವೂ ಅದ್ಭುತವಾಗಿರುತ್ತದೆ. ಆದರೆ ಮನದ ವಿರೋಧಾಭಾಸಗಳು ಮತ್ತು ಅನುಮಾನ್ಗಳು ಎಲ್ಲವನ್ನೂ ಹಾಳು ಮಾಡುತ್ತವೆ, ನಾವು ತೊಂದರೆಯಲ್ಲಿದ್ದಾಗ ಈ ತರಹದ ಮನಸ್ಥಿತಿಯನ್ನು ಹೊಂದಿರುತ್ತೇವೆ.'ಹೋ ಇದು ಅಸಾಧ್ಯ. ಇದುನ್ನು ನಾನೆಂದಿಗೂ ನಿರ್ವಹಿಸುವುದಿಲ್ಲ. ಮತ್ತು ಇದು ಉಲ್ಬಣಗೊಳ್ಳಬಹುದು, ನನಗೆ ಬೇಡವಾದ ಸ್ಥಿತಿಯಲ್ಲಿ ಮುಂದುವರೆದರೆ., ಇನ್ನೂ ಕೆಟ್ಟ ಸ್ಥಿತಿಯನ್ನು ತಲಪಬಹುದು. ಹೀಗೆ ಆದರೆ, ಹಾಗೆ ಆದರೆ..," ಈ ರೀತಿಯಾಗಿ ನಾವು ಯಾವ ಶಕ್ತಿಯನ್ನು ಸ್ವೀಕರಿಸಬೇಕಾಗಿದೆಯೋ ಅದರ ಮತ್ತು ನಮ್ಮ ನಡುವೆ ಅಡ್ಡಗೋಡೆಯನ್ನು ಕಟ್ಟಿಕೊಳ್ಳುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/403–04 – ಶ್ರೀಮಾತೆ**

## ದೇವರು, ಬೆಳಕು, ಸ್ವಾತಂತ್ರ್ಯ, ಅಮರತ್ವ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

ಮನುಷ್ಯನ ಎಚ್ಚೆತ್ತ ಆಲೋಚನೆಯಲ್ಲಿನ ಮೂಲ ತಲ್ಲೀನತೆಯಲ್ಲಿ, ಕಾಣಿಸುವುದೇನೆಂದರೆ, ಅವನ ಸಹಜವಾದ ಮತ್ತು ಪರಮ ತಲ್ಲೀನತೆ, – ಅದು ಬಹಳ ಕಾಲದವರೆಗೆ ಯಾವುದೇ ಸಂದೇಹ ಮನೋವೃತ್ತಿ ಮತ್ತು

ಬಹಿಷ್ಕಾರದಂತಹ ಸಂಗತಿಗಳಿಂದ ದೂರವೇ ಉಳಿದುಕೊಳ್ಳುತ್ತದೆ – ಅದು ಅವನು ಊಹಿಸುವ ಆಲೋಚನೆಗಳಿಗಿಂತ ಉನ್ನತವಾದದ್ದು ಕೂಡ, ಜೊತೆಗೆ ದೈವೀಕರಣಗೊಳಿಸುವಲ್ಲಿ ಪರಿಪೂರ್ಣತೆದೆಡೆಗೆ ತುಡಿತವನ್ನು ಹೊಂದಿ, ಶುದ್ಧ ಸತ್ಯ ಮತ್ತು ಅಮಿಶ್ರಿತ ಆನಂದ, ರಹಸ್ಯವಾದ ಅಮರತ್ವದ ಸಂವೇದನೆಗಳಲ್ಲಿ ತನ್ನನ್ನು ತಾನು ಪ್ರಕಟಗೊಳಿಸುತ್ತದೆ. ಪುರಾತನ ಉಷಾಕಾಲದಿಂದ ಮನುಷ್ಯನ ಈ ಜ್ಞಾನ ಸತತವಾದ ಅಭೀಪ್ಸೆಗೆ ಸಾಕ್ಷಿಯಾಗಿದೆ; ಇಂದಿನ ಕಾಲದ ಮಾನವರು ಬಹಿರಂಗದ ಪ್ರಕೃತಿಯ ಮೇಲಿನ ವಿಜಯದ ಬಗ್ಗೆ ತೃಪ್ತಿ ಹೊಂದಿದ್ದಾರೆ ವಿನಹ ಸಂತೃಪ್ತಿ ಹೊಂದಿಲ್ಲ. ಬದಲಾಗಿ ಅದು ಮೊದಲಿನ ಬಯಕೆಗೇ ಹಿಂದಿರುಗುತ್ತದೆ. ವಿವೇಕದ ಮುಂಚಿನ ಸೂತ್ರದ ವಾಗ್ದಾನ – ಅದರ ಕೊನೆಯದು ಕೂಡ – ಅದೇನೆಂದರೆ – ದೇವರು, ಬೆಳಕು ಸ್ವಾತಂತ್ರ್ಯ, ಅಮರತ್ವ....

ಪ್ರಾಣಿಯೆ ಒಂದು ಜೀವಂತ ಪ್ರಯೋಗಶಾಲೆ, ಮತ್ತದರ ಮೂಲಕ ಪ್ರಕೃತಿಯು ಮಾನವನನ್ನು ನಿರ್ಮಿಸಿತು ಎಂದು ಹೇಳಲಾಗುತ್ತದೆ. ಮನುಷ್ಯ ತನ್ನಷ್ಟಕ್ಕೆ ಆಲೋಚಿಸುವ ಮತ್ತು ಜೀವಂತ ಪ್ರಯೋಗಶಾಲೆ. ಅವನಲ್ಲಿ ಮತ್ತು ಅವನ ಪ್ರಜ್ಞಾಯುತ ಸಹಯೋಗದೊಂದಿಗೆ, ಪ್ರಕೃತಿಯು (ಜಗನ್ಮಾತೆಯು) ಅತಿಮಾನವ ಅಥವಾ ದೇವನನ್ನು ನಿರ್ಮಿಸಲು ಬಯಸಿದ್ದಾಳೆ. ಅಥವಾ ಅದಕ್ಕಿಂತ ಹೆಚ್ಚಾಗಿ ದೇವನನ್ನು ಪ್ರಕಟಿಸುವುದು ಎಂದು ನಾವು ಈ ರೀತಿ ಹೇಳಬಹುದೇನೊ. ಒಂದು ವೇಳೆ ಯಾವುದು ನಿದ್ರಾವಸ್ಥೆಯಲ್ಲಿತ್ತೊ, ಅದನ್ನು ಪ್ರಕೃತಿಯು ಹಂತಹಂತವಾದ ವಿಕಾಸದ ಮೂಲಕ ಪ್ರಕಟಿಸುವುದು. ಯಾವುದು ರಹಸ್ಯವಾಗಿ ಹುದುಗಿಹುದೋ ಅದನ್ನು ಬಹಿರಂಗಕ್ಕೆ ಈ ಮೂಲಕ ತರುವುದು. ಪ್ರಕೃತಿಯು ಈ ವಿಕಾಸದ ಯಾವುದೇ ಹಂತದಲ್ಲಿ ನಾವು, ಪ್ರಕೃತಿ ಸ್ಥಗಿತಗೊಳ್ಳಲಿ ಎನ್ನುವ ಹಾಗಿಲ್ಲಾ. ತನ್ನನ್ನು ತಾನು ಮೀರಿಹೋಗುವಂತಹ ಧಾರ್ಮಿಕರು, ಪ್ರಕೃತಿ ಮತ್ತು ತಲ್ಲೀನತೆ ಎನ್ನುವುದಾಗಲೀ ಹೇಳುತ್ತಿದ್ದರೆ, ವಿಚಾರವಾದಿಗಳು ಮಾತ್ರ ಅದೊಂದು ರೋಗ ಅಥವಾ ಭ್ರಮೆ ಅನ್ನುವುದಾಗಲಿ ಎನ್ನುವದೂ ಪ್ರಕೃತಿಯ ಸೂಚನೆ ಮತ್ತು ಪ್ರಯತ್ನದಲ್ಲಿ ತಪ್ಪಾಗುತ್ತದೆ. ಚೈತನ್ಯವು ಭೌತಿಕದಲ್ಲಿ ಹುದುಗಿರುವುದು ಸತ್ಯವಾಗಿದ್ದಲ್ಲಿ ಮತ್ತು ನಮಗೆ ತೋರುತ್ತಿರುವ ಪ್ರಕೃತಿಯು “ರಹಸ್ಯವಾದ ದೇವರು ಸಮ್ಮತ ಗುರಿ”ಯು ಭೂಮಿಯ ಮೇಲೆ ಮಾನವನಿಗೆ ಸಾಧ್ಯವಾಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 21/3–4, 6 – ಶ್ರೀ ಅರವಿಂದರು**

ನಂತರ ದೈವವು  ತನ್ನಲ್ಲೇ ಪ್ರಕಟವಾಗುವುದು ಮತ್ತು ದೇವರು ಮಾನವನಿಗೆ ಅಂತರಂಗದಲ್ಲಿ ಮತ್ತು ಬಹಿರಂಗದಲ್ಲಿ ಭೂಮಿಯ ಮೇಲೆ ಸಾಕ್ಷಾತ್ಕಾರವಾಗಿ, ಒಂದು ಉನ್ನತ ಮತ್ತು ಅತ್ಯಂತ ನ್ಯಾಯ ಸಮ್ಮತವಾದ ಗುರಿ ಸಾಧ್ಯವಾಗುವುದು

## ಜೀವನದ ದೈವೀಕರಣ

ಪುರಾತನ ಆಧ್ಯಾತ್ಮಿಕತೆಯು ಜೀವನದಿಂದ ಪಾರಾಗಿ, ದೈವಿ ಸತ್ಯದಲ್ಲಿ ಸೇರುವುದನ್ನು ಹೇಳುತ್ತದೆ. ಜಗತ್ತು ಎಲ್ಲಿದಿಯೋ ಅದಷ್ಟಕ್ಕೆ ಅದನ್ನು ಅಲ್ಲಿಯೇ ಬಿಟ್ಟು ಇರುತ್ತದೆ, ಏಕೆಂದರೆ ಅದು ಹಾಗಿತ್ತು; ಆದರೆ ನಮ್ಮ ದೃಷ್ಟಿಕೋನದಲ್ಲಿ ಅದಕ್ಕೆ ವಿರುದ್ಧವಾಗಿ ಜೀವನವನ್ನು ದೈವೀಕರಣ ಮಾಡುವುದು, ಭೌತಿಕ ಜಗತ್ತನ್ನು ದಿವ್ಯ ಜಗತ್ತನ್ನು ದಿವ್ಯ ಜಗತ್ತನ್ನಾಗಿಸಿ ಇಡೀ ಜಗತ್ತನ್ನು ರೂಪಾಂತರ ಮಾಡುವುದೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/150**

ನೀವು ಈ ಕ್ಷಣಕ್ಕೆ ಇಲ್ಲಿದ್ದೀರಿ, ಈ ಭೂಮಿಯ ಮೇಲೆ ಎನ್ನಬಹುದು, ಯಾವುದೋ ಒಂದು ಕಾಲದಲ್ಲಿ ಇದನ್ನು ನೀವು ಆಯ್ಕೆ ಮಾಡಿಕೊಂಡಿದ್ದೀರಿ, ಅದು ನಿಮಗೆ ನೆನಪಿನಲ್ಲಿಲ್ಲ. ಆದರೆ, ನನಗೆ ಗೊತ್ತಿದೆ. ಆದಕಾರಣ ನೀವು ಇಲ್ಲಿದ್ದೀರಿ. ಒಳ್ಳೆಯದು, ನೀವು ಕಾರ್ಯಕ್ಕೆ ತಕ್ಕಂತೆ ಉನ್ನತ ಮಟ್ಟಕ್ಕೆ ಏರಬಹುದು, ಆದರೆ ಅದಕ್ಕೆ ನೀವು ಶ್ರಮಿಸಬೇಕು, ನೀವು ಎಲ್ಲಾ ಅಶಕ್ತತೆ ಮತ್ತು ನ್ಯೂನತೆಗಳನ್ನು ಗೆಲ್ಲಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಅಹಂಕಾರಕ್ಕೆ ಸಮಯ ಮುಗೀತು ಎಂದು ಹೇಳಬೇಕು. ನಾವೀಗ ಅಹಂಕಾರವಿಲ್ಲದ ಜನಾಂಗವನ್ನು ಬಯಸುತ್ತೇವೆ. ಅಹಂಕಾರದ ಜಗದಲ್ಲಿ ದೈವೀ ಪ್ರಜ್ಞೆಯನ್ನು ಬಯಸುತ್ತೇವೆ. ನಾವು ಇದನ್ನು ಬಯಸುತ್ತೇವೆ. ಈ ದೈವೀ ಪ್ರಜ್ಞೆಯೇ, ಸರ್ವ ಜನಾಂಗವು ತನ್ನಷ್ಟಕ್ಕೆ ಬೆಳೆದು ಸುಪ್ರಮಾನಸದ ಹುಟ್ಟಿಗೆ ಅನುವು ಮಾಡಿಕೊಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/307**

ಯಾವಾಗ ಮಾನವನ ಮೊದಲ ಸೃಷ್ಟಿಯಾಯಿತು ಎಂದು ಗಮನಿಸಿದರೆ, ಆಗ ಈ ಅಹಂಕಾರವು ಒಂದುಗೂಡಿಸುವ ಘಟಕವಾಗಿತ್ತು. ಈ ಅಹಂಕಾರದ ಸುತ್ತಲೂ ಜೀವಿಯ ಬೇರೆ ಬೇರೆ ಭಾಗಗಳು ಹೊಂದಿಸಲ್ಪಟ್ಟಿದ್ದವು. ಆದರೆ ಈಗ

ಅತಿಮಾನವನ ಹುಟ್ಟಿಗೆ ಸಿದ್ಧತೆ ನಡೆದಿದೆ. ಈಗ ಅಹಂಕಾರವು ಕರಗಿ, ಅಂತರಾತ್ಮಕ್ಕೆ ಹಾದಿ ಮಾಡಿಕೊಡಬೇಕಿದೆ. ಇದು ನಿಧಾನವಾಗಿ ದೈವದ ಮಧ್ಯ ಪ್ರವೇಶದಿಂದಾಗಿ ಮಾನವನಲ್ಲಿ ಪ್ರಕಟವಾಗುತ್ತಿದೆ. ಅಂತರಾತ್ಮನ ಪ್ರಭಾವದ ಅಡಿಯಲ್ಲಿ ದೈವವು ಮಾನವನಲ್ಲಿ ಪ್ರಕಟವಾಗುತ್ತದೆ ಮತ್ತು ಅತಿಮಾನವ ಬರುವುದಕ್ಕೆ ಸಿದ್ಧತೆ ಮಾಡುತ್ತದೆ. ಅಂತರಾತ್ಮವು ಅಮರವಾಗಿದೆ ಮತ್ತು ಅಂತರಾತ್ಮದ ಮೂಲಕ ಭೂಮಿಯ ಮೇಲೆ ಅಮರತ್ವ ಪ್ರಕಟವಾಗುವುದು. ಕಾರಣ  ಮುಖ್ಯವಾದದ್ದು ಏನೆಂದರೆ, ನಮ್ಮ ಅಂತರಾತ್ಮವನ್ನು ನಾವು ಮೊದಲು ಕಂಡುಕೊಳ್ಳಬೇಕು, ಅದರೊಂದಿಗೆ ಒಂದಾಗಬೇಕು ಮತ್ತು ಅಂಕಾರವನ್ನು ಬದಲಿಸುವುದಕ್ಕಾಗಿ ಅನುವು ಮಾಡಿಕೊಡಬೇಕು. ಹೀಗಾಗಿ ಬದಲಾಗಲೇಬೇಕು ಅಥವಾ ಕರಗಿ ಹೋಗಬೇಕು ಎಂಬ ಒತ್ತಡ ಅದರ ಮೇಲೆ ಬೀಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/434 – ಶ್ರೀಮಾತೆ**

## ದೇವರೆಡೆಗೆ ಆರೋಹಣ: 3 ವಿಧಾನಗಳು

ಇತಿಹಾಸದ ಘಟನೆಗಳನ್ನು ವಿವೇಚಿಸುವಾಗ ಒಂದು ವಿಶಿಷ್ಟ ಅಂತರದ ಅವಶ್ಯಕತೆ ಬೇಕಾಗುತ್ತದೆ. ಅದೇ ರೀತಿ ಯಾರಿಗಾದರೂ ಭೌತಿಕ ಘಟನೆಗಳನ್ನು ಮೀರಿ ಉನ್ನತ ಹಂತಕ್ಕೆ ಏರುವುದು ಗೊತ್ತಿದ್ದರೆ, ಆಗ ಭೂಮಿಯ ಮೇಲಿನ ಜೀವನ ಪೂರ್ಣವೆಂದು ಕಾಣಬಹುದು. ಆ ಕ್ಷಣದಿಂದ ಮಾನವ ಜನಾಂಗದ ಎಲ್ಲಾ ಪ್ರಯತ್ನಗಳು ಒಂದೇ ಗುರಿ ಕಡೆಗೆ ಹೋಗಿ ಸೇರುತ್ತವೆ ಅಂದುಕೊಳ್ಳಬಹುದು.

ವ್ಯಕ್ತಿ ನಿಷ್ಠವಾಗಲಿ ಅಥವಾ ಸಮಷ್ಟಿ ಸ್ವರೂಪದಲ್ಲಾಗಲೀ ಮಾನವರು ಬೇರೆ ಬೇರೆ ಹಂತದ ಮೂಲಕ ಅಲ್ಲಿಗೆ ತಲುಪುತ್ತಾರೆ ಎನ್ನುವುದು ನಿಜ. ಈ ಕೆಲವೊಂದು ಮಾರ್ಗಗಳು ಅಂಕು ಮತ್ತು ಡೊಂಕಾಗಿ ಕಂಡು ಮೊದಮೊದಲಾಗಿ ಗುರಿಗೆ ತಲುಪುವುದರ ಬದಲಾಗಿ ಗುರಿಯಿಂದ ದೂರ ಹೋಗುತ್ತವೆ ಎನ್ನಿಸಬಹುದು. ಆದರೆ ಎಲ್ಲವೂ ಅಲ್ಲಿಗೇ ಹೋಗುತ್ತವೆ, ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ, ಇಲ್ಲವೇ ತ್ವರಿತವಾಗಿ ಅಥವಾ ಹೆಚ್ಚು ನಿಧಾನವಾಗಿ ಅಲ್ಲಿಗೇ ಚಲಿಸುತ್ತವೆ.

ಆದರೆ ಈ ಗುರಿ ಏನು?

ಅದೊಂದೇ ಮಾನವನ ಉದ್ದೇಶ ಮತ್ತು ಅವನ ಪ್ರಪಂಚದಲ್ಲಿನ ಜೀವನೋದ್ದೇಶ.

ಗುರಿ: ನೀನು ಏನು ಸಂಕಲ್ಪಿಸುತ್ತೀಯೋ ಅವನನ್ನು ಕರೆ, ವಿವೇಕಿಗಳಿಗೆ ಅವನು ಎಲ್ಲಾ ನಾಮಗಳನ್ನು ಹೊಂದಿದಾತ ಚೀನಾದವರ ತಾವೋ – ಹಿಂದೂಗಳ ಬ್ರಹ್ಮ – ಬೌದ್ಧರ ನಿಯಮ – ಹರ್ಮಸ್‌ರವರ ಒಳ್ಳೆಯದು – ಪುರಾತನ ಯಹೂದಿಗಳ ಪ್ರಕಾರ ಯಾವುದನ್ನು ಹೆಸರಿಸಲಾಗುದಿವುಲ್ಲವೋ – ಕ್ರಿಶ್ಚಿಯನ್ನರ ಗಾಡ್ – ಮುಸ್ಲಿಮರ ಅಲ್ಲಾ – ಭೌತಿಕ ವಾದಿಗಳ ನ್ಯಾಯ ಮತ್ತು ಸತ್ಯ ಮಾನವರ ಜೀವದ ಉದ್ದೇಶವೆಂದರೆ ಅದರ (ದೇವರ) ಪ್ರಜ್ಞೆಯಾಗುವುದು ಅದನ್ನು ಪ್ರಕಟಿಸುವುದೇ ಅವನ ಮಹೋದ್ದೇಶ.

ಎಲ್ಲ ಧರ್ಮಗಳು, ಸಂತರ ಎಲ್ಲಾ ಬೋಧನೆಗಳು ಆ ಗುರಿಯನ್ನು ಹೊಂದುವುದಲ್ಲದೆ ಬೇರೇನೂ ಅಲ್ಲಾ.

ಅವುಗಳನ್ನು ಮುಖ್ಯವಾಗಿ ಮೂರು ವಿಧಾನಗಳನ್ನಾಗಿ ವಿಂಗಡಿಸಬಹುದು.

**ಮೊದಲನೇ ವಿಧಾನ** – ಬುದ್ಧಿವಂತಿಕೆಯದು ಸತ್ಯದ ಮೇಲಿನ ಪ್ರೀತಿ ಪರಮವನ್ನು ಹುಡುಕುವುದು. ವಿವೇಚನೆಯಿಂದ ಅಭ್ಯಾಸದಿಂದ ಮನದಿಂದ ವಿಶ್ಲೇಷಣೆಯಿಂದ ಆಲೋಚನೆಗಳ ಮೇಲೆ ನಿಯಂತ್ರಣ ಮತ್ತು ಏಕಾಗ್ರತೆಯ ಮೂಲಕ ನಾವು ವ್ಯಕ್ತಿಗತವಾದ ಭ್ರಮೆಯನ್ನು ದೂರ ಮಾಡಬೇಕು, ಒಂದು ಅಖಂಡ ವಸ್ತುವಿನಲ್ಲಿನ ಪರಮಾಣುವಿನ ತಿರುಗುವಿಕೆ ಅದೊಂದು ತೋರಿಕೆ ಮಾತ್ರ; ಆಕಾಶ ದ್ರವ್ಯದ ಘನೀಕರಣ ಎನ್ನಬಹುದು.

ನಾವು ಯಾವಾಗ ನಾನು ಎನ್ನುತ್ತೇವೆ ಯಾವುದರ ಬಗ್ಗೆ ಮಾತನಾಡುತ್ತೇವೆ? ದೇಹವೇ ಇಂದ್ರಿಯಗಳೇ? ಸಂವೇದನೆಗಳೇ ವಿಚಾರಗಳೇ ಇವೆಲ್ಲವುಗಳು ಇಲ್ಲಾ.

ಪ್ರತಿಯೊಂದು ಅವಯವದ ಕ್ಷೇತ್ರದಲ್ಲಿ ತೀವ್ರವಾದ ನಿರ್ಧಾರ ಮಾಡುವುದು ನಿರಂತರತೆಯ ತೋರಿಕೆ ಅನಿಸುವುದು; ಈ ನಿರ್ಧಾರ ಮಾಡುವಲ್ಲಿ ಅಂತರಂಗ ಮತ್ತು ಬಹಿರಂಗದ ಮಧ್ಯವರ್ತಿಗಳು ಪ್ರವೇಶಿಸುತ್ತವೆ ಮತ್ತೆ ಎಲ್ಲಿದೆ, ಅದೇನೆಂದರೆ, ಯಾವುದು ಶಾಶ್ವತ, ಸ್ಥಿರವಾದದ್ದು, ಯಾವಾಗಲೂ ಒಂದೇ ರೀತಿ ಇರುವಂತಹದು? ಅದನ್ನು ಹುಡುಕುವುದು, ಪರಮವನ್ನು ಕಂಡುಹಿಡಿಯುವುದು, ಆಳದಿಂದ ಆಳಕ್ಕೆ ಹೋಗಬೇಕು, ಸಾಪೇಕ್ಷದಿಂದ ಸಾಪೇಕ್ಷಕ್ಕೆ ಹೋಗಬೇಕು – ಆಕಾರ

ರೂಪದಲ್ಲಿರುವುದೆಲ್ಲವೂ ಸಾಪೇಕ್ಷ – ಯಾವಾಗ ನಾವು ಅದನ್ನು (ಪರಮಾತ್ಮ) ತಲುಪುತ್ತೇವೆಯೋ ಅದು ನಮ್ಮ ತರ್ಕಕ್ಕೆ ಆಲೋಚಿಸಲಾರದಂತಹುದು, ನಮ್ಮ ಭಾಷೆಯಿಂದ ವಿವರಿಸಲಾಗದು ಆದರೆ ಗುರುತಿಸಿಕೊಳ್ಳುವುದರಿಂದ ತಿಳಿಯಬಹುದು ನಾವು ಅದನ್ನು ಒಳಗೆ ತೆಗೆದುಕೊಂಡು ಹೋಗುತ್ತೇವೆ ಸತ್ಯ ಕೇಂದ್ರ ಪ್ರಾಣ ಅದೇ

**ಎರಡನೆಯ ವಿಧಾನ** – ದೇವರನ್ನು – ಮಾನವತೆಯನ್ನು ಪ್ರೀತಿಸುವುದು, ಈ ವಿಧಾನವು ಯಾರು ಧಾರ್ಮಿಕ ಪ್ರಜ್ಞೆ ಬೆಳೆಸಿಕೊಂಡಿದ್ದಾರೆ ಅವರದು.

ಸಮಗ್ರ ಬೆಳಕಿನ (ಜ್ಞಾನದ) ಒಂದು ಕ್ಷಣದಲ್ಲಿ ನಾವು ಈಗಾಗಲೇ ತಿಳಿದುಕೊಂಡಿದ್ದೇನೆ ಎಂದರೆ ವಿಷಯ ವಿಷಯಗಳಿಗಿಂತ ಅತಿಮುಖ್ಯವಾದದ್ದು ದೈವದೊಳಗಿನ ಅಭೀಪ್ಸೆ.

ಪ್ರತಿ ಕ್ಷಣದಲ್ಲೂ ಸಮಗ್ರ ಆತ್ಮ ಸಮರ್ಪಣೆ ಶಾಶ್ವತ ನಿಯಮಕ್ಕೆ ನಮ್ಮ ಎಲ್ಲಾ ಕ್ರಿಯೆಗಳಲ್ಲಿ ಪರಿಸರಕ್ಕೆ ದೈವೀ ಸಾಕ್ಷಿ ಆತ್ಮವನ್ನು ಮೀಸಲಿಡಬೇಕು, ಸಂಪೂರ್ಣ ಶರಣಾಗತಿ ಹೊಂದಬೇಕು; ನಾವು ಈಗ ನಾವು ಬರೀ ಉಪಕರಣ ಮಾತ್ರ ಆ ಪರಮೋಚ್ಛ ಪ್ರಭುವಿನ ಮುಂದೆ ಒಬ್ಬ ವಿಧೇಯ ಸೇವಕ, ದೇವರ ಮೇಲಿನ ಪ್ರೀತಿ ಎಷ್ಟು ಪೂರ್ಣವಾಗಿರುತ್ತದೆ ಎಂದರೆ ಪರಮ ದೈವದ ಕಾರಣದಿಂದಾಗಿ, ಎಲ್ಲದರಿಂದ ಅನಾಸಕ್ತಿ ಉಂಟಾಗಿ ಅವನ ಮೇಲೆ ಪರಿಪೂರ್ಣ ಏಕಾಗ್ರತೆ ಆಗುತ್ತದೆ.

"ಅಲ್ಲದೇ ಪ್ರೀತಿಗಾಗಿ ಪ್ರೇಮ ಮತ್ತು ಪ್ರೇಮಿಗಳ ನಡುವಿನ ಪರದೆಯನ್ನು ಮೀರುವಷ್ಟು ಉನ್ನತ ಕೇರುವುದು ಏರುವುದು ಅಸಾಧ್ಯವೇನೂ ಅಲ್ಲ."

ಗುರುತಿಸಿಕೊಳ್ಳುವುದು.

**ಮೂರನೇ ವಿಧಾನ** – ಮಾನವತೆಯನ್ನು ಪ್ರೀತಿಸುವುದು.

ಸ್ಪಷ್ಟ ದೃಷ್ಟಿ ಬಂದ ಪರಿಣಾಮವಾಗಿ ಮಾನವತೆಯ ಅಗಾಧವಾದ ದುಃಖವನ್ನು ತಿಳಿದುಕೊಳ್ಳುವ ತೀವ್ರತೆ ಈ ದುಃಖವನ್ನು ನಿಲ್ಲಿಸುವ ಕಾರ್ಯಕ್ಕೆ ಮುಡುಪಾಗಿಡುವ ಸಂಕಲ್ಪವು ಜಾಗ್ರತವಾಗುತ್ತದೆ.

ಅವರು ತಮ್ಮ ಆಲೋಚನೆಗಳಲ್ಲಿ ತಮ್ಮ ಆತ್ಮದಲ್ಲಿ ಮುಳುಗಿ ಹೋಗುತ್ತಾರೆ ಮತ್ತು ತಮ್ಮ ಎಲ್ಲಾ ಶಕ್ತಿಯನ್ನು ತಮ್ಮ ಎಲ್ಲ ಚಟುವಟಿಕೆಗಳಲ್ಲಿ ಪರರಿಗೆ ಸಹಾಯ

ಮಾಡುವಲ್ಲಿ, ಅದು ಎಷ್ಟೇ ಚಿಕ್ಕ ಪ್ರಮಾಣದಲ್ಲಿ ಇದ್ದರೂ ಸಹಿತ ಅದನ್ನು ಈಡೇರಿಸುತ್ತಾರೆ.

"ನಿಮ್ಮ ಹೃದಯವು ಸಹಾನುಭೂತಿ ತುಂಬಿ ತುಳುಕುತ್ತಿರುವಾಗ, ನೀವು ನೋವಿನಿಂದ ಜರ್ಜರಿತವಾದ ಜಗತ್ತಿಗೆ ಹೋಗಬೇಕು, ಹೋಗಲೇಬೇಕು, ಬೋಧಕರಾಗಬೇಕು ಮತ್ತು ಎಲ್ಲೆಲ್ಲಿ ಅಜ್ಞಾನದ ಕತ್ತಲೆ ಆಳುತ್ತದೆಯೋ ಅಲ್ಲಿ ದೀವಿಗೆಯನ್ನು ಬೆಳಗಬೇಕು."

ಈ ರೀತಿ ಮಾನವತೆಗೆ ಮೀಸಲಾಗಿರುವುದು ನಾಲ್ಕು ಕ್ಷೇತ್ರದಲ್ಲಿ ಪ್ರಕಟವಾಗುತ್ತದೆ. ನಾವು ನಾಲ್ಕು ರೀತಿಯಲ್ಲಿ ಬೇರೆಯವರಿಗೆ ಕೊಡಬಹುದು. ಭೌತಿಕ ಕೊಡುಗೆಗಳು, ಬುದ್ಧಿವಂತಿಯ ಕೊಡುಗೆಗಳು, ಆಧ್ಯಾತ್ಮಿಕ ಸಾಮರಸ್ಯ, ಸೌಂದರ್ಯ, ಲಯಬದ್ಧತೆ, ಸಮಗ್ರ ಕೊಡುಗೆ ಮಾರ್ಗಗಳನ್ನು, ಈ ಮೂರು ಸೂತ್ರಗಳನ್ನು ಅನುಸರಿಸುವವರು ಮಾತ್ರ ಇದನ್ನು ಕೊಡಬಲ್ಲರು. ಅವರು ತಮ್ಮೊಳಗೆ ಎಲ್ಲಾ ಅಭಿವೃದ್ಧಿಯ ಮಾರ್ಗಗಳನ್ನು ಸಮನ್ವಯ ಮಾಡಿದ್ದಾರೆ. ಯಾವುದು ಶಾಶ್ವತವೋ ಅದನ್ನು ತಮ್ಮ ಶಾಶ್ವತವನ್ನಾಗಿಸಿಕೊಂಡಿದ್ದಾರೆ. ಯಾವುದು ಶಾಶ್ವತವಾಗಿದೆಯೋ ಅದರ ಬಗ್ಗೆ ಪ್ರಜ್ಞಾವಂತರಾಗಿ ಇರುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 2/129–131 – ಶ್ರೀಮಾತೆ**

# ಶ್ರೀ ಅರವಿಂದರ
# ‘ತಾಂತ್ರಿಕಸಿದ್ಧಿ ಪ್ರಕರಣಂ’

**– ಅನುವಾದ: ಪುಟ್ಟು ಕುಲಕರ್ಣಿ**

## ತಸ್ಮಿನ್ಸ್ಚ ಶಕ್ತಿಪ್ರಕರಣಂ–2

**ಸೂತ್ರ 1; ಶಕ್ತ್ಯುಪಾಸನಾ ತಾಂತ್ರಿಕಸಿದ್ಧಿಃ ।**

**ಶಕ್ತಿ;** ಹೃದಯದಲ್ಲಿ ಸ್ಥಿತವಿರುವ ‘ಶಕ್ತಿ’ ಚೈತ್ಯ ಪುರುಷನಾಗಿದ್ದಾನೆ ಎಂದು ಶ್ರೀ ಅರವಿಂದರ ಸೂತ್ರವಿದೆ. ಶಕ್ತಿ ಎನ್ನುವದನ್ನು ಪ್ರಕೃತಿ ವಾಚಕವಾಗಿ ಸ್ತ್ರೀ ಸ್ವರೂಪದಲ್ಲೂ (ಮಾತೃ ಸ್ವರೂಪದಲ್ಲೂ). ಈಶ ಅಥವಾ ಜಗದೀಶ ಎನ್ನುವ ಭಾವದಲ್ಲಿ ಪುರುಷ ವಾಚಕವಾಗಿಯೂ ಅನುಸಂಧಾನ ಮಾಡಲಾಗುತ್ತಿದೆ. ಇಲ್ಲಿ ಶಕ್ತಿ, ಚೈತ್ಯ ಪುರುಷ ಮತ್ತು ಹೃದಯದ ಸಂರಚನಾ ವ್ಯವಸ್ಥೆಯನ್ನು ಮೊದಲು ಅಭ್ಯಸಿಸಬೇಕಾಗಿದೆ. ಹೃದಯದಲ್ಲಿ ಸ್ಥಿತಗೊಳ್ಳುತ್ತದೆ (ಸ್ಥಿತಗೊಳ್ಳುತ್ತಾನೆ) ಎಂದರೆ ಈ ಮೊದಲು ಅದರ ಸ್ಥಾನ ಎಲ್ಲದೆ? ಇಲ್ಲಿ ಸ್ಥಿತಗೊಳ್ಳಲು ಅಗತ್ಯವಿರುವ ‘ಹೃದಯ’ ಸಂರಚನೆಗೊಳ್ಳುವದು ಹೇಗೆ? ಇಲ್ಲಿಗೆ ಆಗಮಿಸುವ ರೀತಿ ಯಾವುದು? ಎಂದೆಲ್ಲಾ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ಪಥದಲ್ಲಿ ಸಾಗಬೇಕಿದೆ.

‘ಶಕ್ತಿ’ಯು ಪ್ರಕೃತಿಯೂ ಹೌದು; ಶಾಶ್ವತವೂ ಹೌದು; ನಿರಂತರವೂ ಇದೆ; ಸರ್ವ ಸೃಷ್ಟಿ–ಸ್ಥಿತಿ–ಲಯಗಳ ಸರಣಿಗಳಲ್ಲಿ ಸದಾ ಸ್ಪಂದನಶೀಲವಾಗಿಯೇ ಇರುತ್ತದೆ. ಮುಖ್ಯವಾಗಿ ಇದು ಅಕ್ಷಯವೂ ಆಗಿದೆ. ಇದನ್ನೇ ಈಶಾವಾಸ್ಯ ಉಪನಿಷತ್ತಿನ ಪ್ರಪ್ರಥಮ ಶ್ಲೋಕವು ಸುಸಷ್ಟವಾಗಿ ‘ಈಶಾವಾಸ್ಯಮಿದಂ ಸರ್ವಂ, ಯತ್ಕಿಂಚ್ ಜಗತ್ಯಾಂ ಜಗತ್’ ಎಂದು ಈ ಶಕ್ತಿಯ ಪ್ರಕರಣಕ್ಕೆ ಪರಿಪೂರ್ಣವಾದ ಪಥವನ್ನು ತೋರಿದೆ. ಇಲ್ಲಿ “ಈ” ಎನ್ನುವದು ಬೀಜಾಕ್ಷರ; ಇದು ಚೇತನವನ್ನು ಪ್ರತಿನಿಧಿಸುವ ಬೀಜಾಕ್ಷರ. ಇದಕ್ಕೆ ಅನುಸ್ವಾರವನ್ನು ಸೇರಿಸಿ ‘ಈಂ’ ಎಂದು ಶಕ್ತ್ಯುಪಾಸನಾ ಮಾರ್ಗದಲ್ಲಿ ಅನುಷ್ಠಾನಿಸಲಾಗುತ್ತಿದೆ. “ಈ”ಕಾರವು ಪಂಚದಶೀ ಮಂತ್ರದ ಮೂರನೇ ಅಕ್ಷರವಾಗಿ ಅನುಷ್ಠಾನಗೊಳ್ಳುತ್ತಿದೆ. ಆದರೆ ಈ ಸ್ಥಿತಿಯು ಶಬ್ದದ ಸ್ವರೂಪದಲ್ಲಿ ನಿರ್ದೇಶಿಸಲು ಸಾಧ್ಯವಿಲ್ಲ. ಹೀಗಾಗಿ “ಈದೃಗಿತ್ಯವಿನಿರ್ದೇಶ್ಯಾ” ಎಂದರೆ ‘ಇಂತಹವಳು ಎಂದು ನಿರ್ದೇಶಿಲು ಸಾಧ್ಯವಿಲ್ಲದವಳು ಎಂದೆ ಇದೆ. ಇನ್ನು ‘ಶ’ ಎನ್ನುವದು ಜಡವನ್ನು – ಅಂದರೆ ಚೇತನವನ್ನು ಸ್ವೀಕರಿಸುವ

ಪೂರ್ವದಲ್ಲಿ ಇರುವ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಇವೆರಡರ ಸಂಯೋಗವೇ ಅಂದರೆ "ಈ" ಮತ್ತು "ಶ" – ಈ ಜಗತ್ತು–ಬ್ರಹ್ಮಾಂಡವಾಗಿದೆ. ಇಲ್ಲಿ ಅವಕಾಶದಲ್ಲಿ ಸ್ಥಿತವಿರುವ 'ಈ' ಮತ್ತು 'ಶ'ಗಳು, ತಮ್ಮನ್ನೇ ತಾವು ಭುಂಜಿಸಿಕೊಂಡು, ಆಕಾರವನ್ನು ತಾಳುತ್ತವೆ. ಇದನ್ನೇ ಈಶಾವಾಸ್ಯ ಉಪನಿಷತ್ತು "ತೇನ ತ್ಯಕ್ತೇನ ಭುಂಜಿತಾ" ಎಂದು ಹೇಳಿದೆ. ಈ ರೀತಿಯಾಗಿ ಅನಂತಾನಂತವಾದ ಅವಕಾಶದಲ್ಲಿ ಇರುವ 'ಈ' ಮತ್ತು 'ಶ'ಗಳು ಸಂಯೋಗಗೊಂಡು ನಾವೆಲ್ಲ ಕಾಣುತ್ತಿರುವ 'ಜಗತ್ತಿನ' ಸೃಷ್ಟಿಯಾಗಿದೆ. ಅಗಣಿತವಾಗಿರುವ ಗ್ರಹಗಳು–ತಾರಾ ಪುಂಜಗಳು–ನೀಹಾರಿಕೆಗಳು ಇತ್ಯಾದಿ ಇದ್ದರೂ ಇನ್ನೂ 'ಅಪಾರವಾಗಿಯೇ ಅವಕಾಶ' ಇದ್ದೇ ಇದೆ.

ಇದನ್ನು ಹಯಗ್ರೀವ ಮುನಿ ವಿರಚಿತ "ಶ್ರೀ ಲಲಿತಾ ತ್ರಿಶತಿ ಸ್ತೋತ್ರದಲ್ಲಿ –

**"ಈದೃಗೀತ್ಯವಿನಿರ್ದೇಶ್ಯಾ ಚೇತ್ವರಶ್ವವಿಧಾಯಿನೀ।**
**ಈಡೀತಾ ಚೇಶ್ವರಾರ್ಧಾಂಗಶರೀರಾಶಾಧಿದೇವತಾ ।**
**ಈಶ್ವರಪ್ರೇರಣಕರೀ ಚೇಶತಾಂಡವಸಾಕ್ಷಿಣೀ ।**
**ಈಶ್ವರೋತ್ಸಂಗನಿಲಯಾ ಚೇತಿಬಾಧಾವಿನಾಶಿನೀ ॥**

ಎಂದು ವರ್ಣಿಸುತ್ತ, "ಈಹಾವಿರಹಿತಾ ಚೇತಶಕ್ತಿರೀಷತ್ಸ್ಮಿತಾನನಾ। ಎಂದು ಈ ಚೈತನದ ಸ್ವರೂಪದ ಭೂಮ ವಿನ್ಯಾಸವನ್ನು ಸೂತ್ರವಾಗಿ ಅಭಿವ್ಯಕ್ತಿಸಿದೆ. ಇಲ್ಲಿ "ಈ" ಎನ್ನುವದು ಬೀಜಮಂತ್ರವಾದದ್ದು ಕೇವಲ ಭರತ ಖಂಡಕ್ಕೆ ಮಾತ್ರವಲ್ಲ. ಪಾಶ್ಚಾತ್ಯ ಚಿಂತನದಲ್ಲಿಯೂ ಸಹಿತ "ಇ=$MC^2$" ಎಂದು ಸೂತ್ರವಿರುವದನ್ನು, ಅದರ ಅಪಾರ ಶಕ್ತಿಯ ಉತ್ಪಾದನೆಯ ಕುರಿತು ಐನ್‌ಸ್ಟೀನ್ ಸೂತ್ರೀಕರಿಸಿದ್ದಾರೆ.

ಬ್ರಹ್ಮಾಂಡದಲ್ಲಿರುವ ಚೇತನವು ಆಕಾರ ರೂಪ ಪಡೆದುಕೊಂಡು ಅಸ್ತಿತ್ವದ ಸಾಕಾರವನ್ನು ಪಡೆದುಕೊಳ್ಳುತ್ತದೆ ಎಂದಾದರೆ, ಅದೇ ರೀತಿಯಲ್ಲಿಯೇ ಮಾನವನ ದೇಹವೂ ಸಹಿತ ಇದೇ ಚೇತನದ ಸೂಕ್ಷ್ಮಾತಿಸೂಕ್ಷ್ಮವಾದ ಅಂಶವನ್ನು ಪ್ರಾಣ ಚೇತನವನ್ನಾಗಿ ಪಡೆದುಕೊಂಡು ಮಾನವ ದೇಹದ(ಯಂತ್ರದ) ಸ್ವರೂಪದಲ್ಲಿ ಲೀಲೆಗೊಳಪಡುತ್ತದೆ. ತಾಂತ್ರಿಕಸಿದ್ಧಿ ಪ್ರಕರಣದಲ್ಲಿ ಪ್ರಥಮದಲ್ಲಿ – ಪದಾರ್ಥ ಜ್ಞಾನವಾಗಿ – ಬರುವದು ಯಂತ್ರ, ಅಂದರೆ ಈ 'ದೇಹ'. ಇದನ್ನು ಆದಿಶಂಕರಾಚಾರ್ಯರು ತಮ್ಮ 'ಶಿವಾನಂದ ಲಹರೀ'ಯಲ್ಲಿ "ಸಂಸಾರ ಸಾರ ತಪ್ಪಿಸಲೂ ಪೂರ, ಭ್ರಮಣಕ್ಕೆ ದಿಶೆಯನ್ನು । ಚೇತನದ ಕೊಳದಿ ವಾಸಿಸಲಿ ಶಿವ, ಶಿವಾನಂದ ಲಹರಿಯಿತ್ತು (ಶಿವಾನಂದ ಲಹರೀ ಶ್ಲೋಕ 2)" ಎಂದು ಪುರುಷ

ಸ್ವರೂಪದಲ್ಲಿಯೂ ಅಭಿವ್ಯಕ್ತಿಸಿದ್ದಾರೆ. ದೇಹದ ಸ್ವರೂಪವು ಪುರುಷ ಅಥವಾ ಸ್ತ್ರೀ ಯಾವುದೇ ಇದ್ದರೂ, ಆಂತರ್ಯದಲ್ಲಿ–ಹೃದಯದಲ್ಲಿ– ಸ್ಥಿತಗೊಂಡಿರುವ "ಈ ಮತ್ತು ಶ" ಸ್ವರೂಪವನ್ನು ಸ್ಪಂದನಗೊಳಿಸಿಕೊಳ್ಳುವದೇ ಈ ಯಂತ್ರದ (ದೇಹದ) ಮೂಲ ಗುರಿಯಾಗಿದೆ.

ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ Kenetic-Forceನ್ನು ರೂಪಾಂತರದ ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ. ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರದಿಂದ ನಿರ್ಮಾಣ–ಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿ ಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ. ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ – ಅನುಷ್ಠಾನಕ್ಕೆ – ಅಭಿವ್ಯಕ್ತಿಗೆ –ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣತತ್ತ್ವ ಎನ್ನುತ್ತಾರೆ.

ಇನ್ನು – ಪ್ರಕಾಶ, ಅಗ್ನಿ, ವಿದ್ಯುತ್, ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ (ಗುಣಗಳಾಗಿವೆ).

**ಉಪಾಸನೆ:** ಜಾಗ್ರತಗೊಂಡ ಶಕ್ತಿಯು ಸರ್ವಾಂತರ್ಯಾಮಿಯಾಗಿರುತ್ತದೆಯೋ, ಅದರೊಡನೆ ಈ 'ದೇಹದ' ಸಾಕಾರದಲ್ಲಿ ಇರುವ "ಯಂತ್ರವೂ" ನಿರಂತರವಾಗಿ ಸಂಯೋಗ ಹೊಂದಲು ಇರುವ ಪಥವೇ 'ಉಪಾಸನೆ'. ಭೌತಿಕ ಸ್ವರೂಪದ–ಪಂಚ ಭೂತಾತ್ಮಕ ಸಂರಚನೆಯಲ್ಲಿ – ನಿಗದಿತ ಸಮಯದ ಅಸ್ತಿತ್ವವನ್ನು ಹೊಂದಿರುವ

ಅವಧಿಯಲ್ಲಿಯೇ ಇದನ್ನು ಸಾಧಿಸಿಕೊಳ್ಳಬೇಕಾಗಿದೆ. ನಿರಂತರವಾಗಿರುವ 'ಶಕ್ತಿ'ಯು ಸದಾ ಈ 'ನಿರ್ಬಂಧಿತ ಸ್ವರೂಪದ ಯಂತ್ರಸ್ಥಿತ ಶಕ್ತಿ'ಯೊಡನೆ (ಚೇತನದ ಸೂಕ್ಷ್ಮ ಸ್ವರೂಪದೊಡನೆ) ಸ್ಪಂದಿಸಲು ಅಭೀಪ್ಸೆಯಲ್ಲಿಯೇ ಇರುತ್ತದೆ. ಇದಕ್ಕೆ ಮೂಲ ಕಾರಣವೆಂದರೆ, ಈ ಭೌತಿಕ–ಲೌಕಿಕ ಸ್ವರೂಪದಲ್ಲಿ, ಬಂಧನದ ಸ್ವರೂಪಕ್ಕೆ ಸಿಲುಕಿಕೊಂಡ ಚೇತನಾಂಶವು, ಮತ್ತೆ ತನ್ನ ಮೂಲ ನೆಲೆಗೆ ಬರಬೇಕೆನ್ನುವ ಆಶಯವಿರುತ್ತದೆ. ಇದರ ಗತಿ–ಗಮನಗಳನ್ನು, ಉಪಾಸನಾ ಪಥವು ರೂಪಿಸುತ್ತದೆ.

ಈಗ ಉಪಾಸನೆ ಎಂದರೆ, ಪೂಜೆ–ಆರಾಧನೆ–ಸಮರ್ಪಣೆ–ಶರಣಾಗುವದು ಎಂದೆಲ್ಲಾ ಆಯಾಮಗಳಿವೆ. ಪೂಜಾ ವಿಧಾನಗಳಿವೆ. ಆರಾಧನಾ ಪದ್ಧತಿಗಳಿವೆ. ಸಮರ್ಪಣಾ ಹಂತಗಳೂ ರೂಪಿತಗೊಂಡಿವೆ. ಆದರೆ ಇಲ್ಲಿ ಬಹುತೇಕವಾಗಿ, ಬಾಹ್ಯದ ವಿಧಿ–ವಿಧಾನಗಳಲ್ಲಿ ಅರ್ಚನೆ, ಪ್ರಾರ್ಥನೆಯ ಪ್ರಾರಂಭಿಕ ಗತಿಯಲ್ಲಿ ಇರುವ ಗೀತ–ಗಾಯನ ಇತ್ಯಾದಿ ಹಂತಗಳಲ್ಲಿ ಅನುಷ್ಠಾನದಲ್ಲಿವೆ. ಇವೆಲ್ಲ ಪ್ರಾರಂಭಿಕ ಹಂತಗಳು ಮಾತ್ರ ಎನ್ನುವದು ಇಲ್ಲಿ–ಶಕ್ತ್ಯುಪಾಸನಾ ತಾಂತ್ರಿಕಸಿದ್ಧಿಯಲ್ಲಿ ಗಮನಿಸಬೇಕಾಗಿದೆ. ಬಾಹ್ಯದ ಸಂಪರ್ಕದಲ್ಲಿಯೇ ಇರಲೆಂದೇ ರೂಪಿತಗೊಂಡಿರುವ 'ಪಂಚೇಂದ್ರಿಯಗಳು' ಈ ಪ್ರಾರಂಭಿಕ ಹಂತದ ವಿಧಾನಗಳಲ್ಲಿ ಸಂತೃಪ್ತಿಯನ್ನು ಕಲ್ಪಿಸಿಕೊಳ್ಳುತ್ತವೆ. ಆದರೆ ಇವೆಲ್ಲಕ್ಕೂ 'ಸೂಕ್ತ ನಿರ್ದೇಶನ' ನೀಡುತ್ತಿರುವ ಮನಸ್ಸು, ಪ್ರಜ್ಞೆ, ಚಿತ್ತಗಳು ಮಾತ್ರ ಈ ಬಾಹ್ಯದ ಅನುಭವದ ಆಚೆ ಇರುವ ಅನುಭಾವದ ಹಂತಕ್ಕೆ ಅಭೀಪ್ಸೆ ಹೊಂದಿರುತ್ತವೆ.

ಅದಕ್ಕಾಗಿಯೇ ಮಾನಸ ಪೂಜಾ ವಿಧಾನವೂ ಅನುಷ್ಠಾನದಲ್ಲಿದೆ. ಇಲ್ಲಿ ಬಾಹ್ಯ ಪರಿಕರಗಳು ನಿಮಿತ್ತ ಮಾತ್ರ. ಒಂದು ವೇಳೆ ಇರದೇ ಹೋದರೂ ಯಾವುದೇ ರೀತಿಯ ವ್ಯತ್ಯಯಗಳು ಉಂಟಾಗುವದಿಲ್ಲ. ಈ ಮಾನಸ ಪೂಜೆಯನ್ನು ಪ್ರಾರಂಭದ ಹಂತದಲ್ಲಿ, ಎದುರಿಗೆ ಇರುವ ಮೂರ್ತಿಯನ್ನು ಕೇಂದ್ರವಾಗಿರಿಸಿಕೊಂಡೂ ಪ್ರಾರಂಭಿಸಬಹುದು. ಇಲ್ಲವೇ ಭೂಮಸದೃಶವಾಗಿರುವ ಪ್ರಕೃತಿಯ ವಾತಾವರಣದಲ್ಲಿ–ಪರ್ವತದ ಶಿಖರಾಗ್ರದಲ್ಲಿ, ಅರಣ್ಯ ಏಕಾಂತತೆಯಲ್ಲಿ, ಪ್ರಕೃತಿಯನ್ನೇ ಎದುರಿಗಿರಿಸಿಕೊಂಡು ಉಪಾಸನಾ ಪಥದಲ್ಲಿ ಸಾಗಬಹುದು. ಶಕ್ತ್ಯುಪಾಸನಾ ಹಂತದಲ್ಲಿ ಇವೆರಡೂ ಪದ್ಧತಿಗಳು ಇವೆ. ಆಯಾ ಪದ್ದತಿಗಳಲ್ಲಿ ಇರುವ ಸೂತ್ರದ ಸ್ವರೂಪದಲ್ಲಿ ಅನುಷ್ಠಾನ, ಅಧ್ಯಯನ, ಅನುಸಂಧಾನ, ಸ್ಪಂದನಗಳು ಇವೆ.

ಆದರೆ ಇಲ್ಲಿ ಮುಖ್ಯವಾಗಿ ಶ್ರೀ ಅರವಿಂದರು ಅಭಿವ್ಯಕ್ತಿಸುತ್ತಿರುವ ಈ ಶಕ್ತ್ಯುಪಾಸನಾ ಎನ್ನುವದು ವೈಶ್ವಿಕ ಶಕ್ತಿಯನ್ನು, ಅದೂ ಊರ್ಧ್ವಾತಿ ಊರ್ಧ್ವದಲ್ಲಿ ಸ್ವಯಂಪ್ರಕಾಶಿತ ಕಾಂತಿಯಲ್ಲಿ ಇರುವ ನಿತ್ಯ–ನಿರಂತರವಾಗಿರುವ ಶಕ್ತಿಯ ಸ್ವರೂಪವನ್ನು ತೋರಿಸುತ್ತಿದ್ದಾರೆ. ಇಡೀ 'ಸೌರವ್ಯೂಹವೇ ಇಲ್ಲಿ ಮೂಲಾಧಾರ!". ಸೂರ್ಯ ಕೇಂದ್ರಿತವಾಗಿರುವ (ಈ ಅಪಾರ ವಿಸ್ತಾರದ ವ್ಯಾಸವೇ – 3720 ಕೋಟಿ ಕಿಲೋಮೀಟರ್!! ) ಈ ವ್ಯೂಹವೇ ಮಾನವ–ಯಂತ್ರವನ್ನು ರೂಪಿಸಿದೆ; ಜೊತೆಗೆ ನಿಯಂತ್ರಿಸುತ್ತಿದೆ ಕೂಡಾ.

ಸಧ್ಯದ ಮಾನವ ವಿಕಾಸದ –ವೈಜ್ಞಾನಿಕ ಪ್ರಗತಿಯ–ಹಂತದಲ್ಲಿ, ಮಾನವ ಕುಲವು ಭೌತಿಕವಾಗಿ ಚಂದ್ರನನ್ನು ತಲುಪಿದೆ. ಮಂಗಳನ ಅಂಗಳಕ್ಕೂ ಕಾಲಿಡಲು ಯತ್ನಿಸುತ್ತಿದೆ ಅಷ್ಟೇ. ಆದರೆ ಮನೋಚೇತನಕ್ಕೆ ಯಾಂತ್ರಿಕ ಸ್ವರೂಪವನ್ನು ಆವಾಹಿಸಿಕೊಂಡು, ನಿರ್ಮಿತಿಯಾಗಿರುವ 'ಜೇಮ್ಸ ವೆಬ್ ಟೆಲಿಸ್ಕೋಪ'ನಿಂದಾಗಿ, ಮಿಲಿಯಾಂತರ ಜ್ಯೋತಿರ್ವರ್ಷ ದೂರದಲ್ಲಿರುವ, ಬ್ರಹ್ಮಾಂಡ ಸ್ವರೂಪದ "ಶಕ್ತಿಯ ಮೂಲಗಳನ್ನು" ದೃಷ್ಟಗೊಳ್ಳುತ್ತಿದೆ. ಈ ಬ್ರಹ್ಮಾಂಡದ–ಸೃಷ್ಟಿಯ–ಮೂಲವಾಗಿರುವ "ಶಕ್ತಿಯ" ಸ್ವರೂಪದ ಬಗೆಗೆ ನವನವೀನ ಶೋಧನಾ ಮಾರ್ಗಗಳೂ ನಿರ್ಮಿತಿಗೊಳ್ಳುತ್ತಿವೆ. ಇದು ಬಾಹ್ಯದ ಪೂಜಾ ಸ್ವರೂಪದಲ್ಲಿದ್ದಂತೆ ಕಂಡುಬಂದರೂ, ಈ ಭೂ–ವ್ಯಾಪ್ತಿಯನ್ನು ಮೀರಿದ ಮೇಲೆ, ಮತ್ತೂ ಆರೋಹಣದಲ್ಲಿ ಸೂರ್ಯ ಮಂಡಲವನ್ನೂ ದಾಟಿದ ಮೇಲೆ, ಲಭ್ಯಗೊಳ್ಳುತ್ತಿರುವ ಎಲ್ಲ ದತ್ತಾಂಶಗಳೂ ಶಕ್ತಿಯ ಸ್ವರೂಪದಲ್ಲಿಯೇ ಲಭ್ಯವಾಗುತ್ತಿದ್ದು ಇವುಗಳನ್ನು, ಮತ್ತೆ ಮನುಕುಲಕ್ಕೆ ಅಧ್ಯಯನಕ್ಕಾಗಿ ಹೊಸ ಹೊಸ ಪಥಗಳನ್ನು ನಿರ್ಮಿಸುತ್ತಿವೆ.

ಈ ಎಲ್ಲ ಹಂತಗಳೂ ನಮಗೆ ಕೇವಲ 'ಪದಾರ್ಥ ಜ್ಞಾನ'ದ ಸ್ವರೂಪದಲ್ಲಿ ಲಭ್ಯವಾಗುತ್ತಿರುವ ಪ್ರಾರಂಭಿಕ ಅವಧಿ ಇದು. ಈ ಭೂಮಾತಿಭೂಮ ಬ್ರಹ್ಮಾಂಡದ ಸಂರಚನಾ ವ್ಯವಸ್ಥೆಗೆ ಮೂಲ ಕಾರಣವಾಗಿರುವ "ಈ" ಏನು ಎನ್ನುವದುನ್ನು ಅರಿತುಕೊಳ್ಳಬೇಕಾಗಿದೆ. ಇದು ಇಂದು 'ಉಪಾಸನಾ ಪಥವಾಗಬೇಕಾಗಿದೆ'.

(ಸಶೇಷ)

# ಶ್ರೀ ಅರವಿಂದರ ಅಭಿವ್ಯಕ್ತಿಯ "ಯೌಗಿಕ ಭಾಷಾಸ್ವರೂಪ"

– ಪುಟ್ಟು ಕುಲಕರ್ಣಿ

ಯೋಗ ಸಾಧನೆಯ ಹಂತದ ಅನುಭವಗಳನ್ನು ಎಷ್ಟು ಸೃಷ್ಟಿಶೀಲವಾಗಿಸಬಹುದು ಎನ್ನುವದೇ ಸಾವಿತ್ರಿಯ ಗುರಿ ಎಂದು ಶ್ರೀ ಅರವಿಂದರೇ ಬರೆದಿದ್ದಾರೆ. ಅದನ್ನು ಸಾಧಿಸಿಕೊಳ್ಳುವ ಹಂತಗಳನ್ನೂ ಭಾಷಾ ಸ್ವರೂಪದ ವಿವೇಚನೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ಇಂತಹ ಸೃಜನಾತ್ಮಕವಾದ ಅಭಿವ್ಯಕ್ತಿಗಳ ಬಗೆಗೆ, ಕನ್ನಡದಲ್ಲೂ ಸಹಿತ ಇದರ ಬಗೆಗೆ ಆಸಕ್ತಿಯನ್ನು ಮೂಡಿಸುವದು ಇಂದಿನ ಅಗತ್ಯತೆಯೂ ಆಗಿದೆ. ಏಕೆಂದರೆ, ಶ್ರೀ ಅರವಿಂದರ ಎಲ್ಲ ಕೃತಿಗಳೂ, ವಿಷಯಗಳು ಸಂಪೂರ್ಣವಾಗಿ ಯೋಗದ ಪರಿಭಾಷೆಯಲ್ಲಿ ಇವೆ ಎನ್ನುವದು ಒಂದು ಮುಖ್ಯ ವಿಷಯ. ಹೀಗಾಗಿ ಲೌಕಿಕದ ಅರ್ಥದ ಜೊತೆಜೊತೆಗೆ (ಸಾಧ್ಯವಿದ್ದಷ್ಟೂ) ಯೋಗದ ಪರಿಭಾಷೆಯನ್ನೂ ರೂಪಿಸಿಕೊಂಡಲ್ಲಿ ಅರ್ಥಾನುಸಂಧಾನಕ್ಕೆ ಸುಲಭವಾದೀತು.

ಶ್ರೀ ಅರವಿಂದರ ದರ್ಶನಾವಸ್ಥೆಯಲ್ಲಿ ಅಭಿವ್ಯಕ್ತಗೊಂಡಿರುವ ಭಾಷಾ ವಿಶೇಷತೆ. ಅದೂ ಆಂಗ್ಲ ಭಾಷೆಯಲ್ಲಿ. ಆಧ್ಯಾತ್ಮಿಕ ಭಾಷಾ ವ್ಯವಸ್ಥೆಯಲ್ಲಿ – ದರ್ಶನದ ಹಂತದಲ್ಲಿ ದೃಷ್ಟಗೊಂಡದ್ದನ್ನು ಶ್ರಾವ್ಯಗೊಳಿಸುವ ಹಂತದಲ್ಲಿ 'ಧ್ವನಿಪೂರ್ಣ'ಗೊಳಿಸುವಾಗ, ಆಯಾ ಸಂಧರ್ಭದಲ್ಲಿ ಇರುವ ಶಬ್ದಗಳನ್ನು ಆಧರಿಸಿಯೇ ರೂಪಿಸಬೇಕಾದುದು ಅನಿವಾರ್ಯವೂ ಹೌದು. ಪ್ರಕೃತಿ ಸಹಜವೂ ಹೌದು. ಹೀಗಾಗಿ ಅಲ್ಲಿರುವ ಶಬ್ದಗಳನ್ನು ಸಂಕೇತಗಳಾಗಿ, ಪ್ರತಿಮೆಗಳಾಗಿ ಅನ್ವಯಗೊಳಸಿಕೊಳ್ಳುವ ಅಧ್ಯಯನ ರೂಪುಗೊಳ್ಳಬೇಕಾಗಿದೆ. ಇದು ಜಗತ್ತಿನ ಎಲ್ಲ ಕಡೆಗೂ ಸರ್ವೇ ಸಾಮಾನ್ಯವಾಗಿ ಇರುವ ವ್ಯವಸ್ಥೆ.

ಇದಕ್ಕೆ ಒಂದು ಉದಾಹರಣೆಯನ್ನು ಇದೇ ಸಾಲುಗಳಲ್ಲಿ ನೋಡಿದರೆ – Chiaroscuro – ಶಬ್ದವಿದೆ. ಇದು ನೇರಾನೇರವಾಗಿ ಪಾಶ್ಚಾತ್ಯ ಕಲೆಯಲ್ಲಿ ರೂಪಣೆಗೊಂಡಿರುವ ಒಂದು ವಿಶಿಷ್ಟ ಸ್ವರೂಪದ ಅಭಿವ್ಯಕ್ತಿ. 15ನೇ ಶತಮಾನದಲ್ಲಿ ಚಿತ್ರಕಲೆಯ ಮೂಲಕ ಬಂದ ಶಬ್ದವಿದು. ಗಾಢ ಬೆಳಕಿನ ವರ್ಣಗಳಲ್ಲಿ ಪ್ರತಿಪಾದನೆ ಇಲ್ಲಿನ ಮುಖ್ಯ ಗುಣ. ದೇವತೆಗಳನ್ನು ಚಿತ್ರಿಸುವಾಗ ಪ್ರಗಾಢವಾದ ಬಣ್ಣದಿಂದ ಚಿತ್ರಿಸುವದು, ಅಥವಾ ದೇಹಗಳನ್ನು ಸ್ಪಷ್ಟವಾಗಿ ತೋರಿಸಲು ಗಾಢವರ್ಣ–ಬೆಳಕಿನ ಭಾವಗಳನ್ನು ಬಳಸುತ್ತಿದ್ದರು. ಅದೇ ಮುಂದೆ

ಯಾಂತ್ರೀಕೃತ ಫೋಟೊಗ್ರಾಫಿಯಲ್ಲಿಯೂ ಮುಂದುವರೆಯಿತು. ಸಿನೇಮಾದಲ್ಲಂತೂ ವಿಜೃಂಭಿಸಲ್ಪಟ್ಟಿತು. ಈ ಗಾಢ ವರ್ಣದಲ್ಲೂ ಗೂಢ ನೆರಳು–ಬೆಳಕುಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ, ಮೇಲ್ಕಂಡ ಸಾಲುಗಳನ್ನು ಭಾರತೀಯ ಶಾಸ್ತ್ರಾಧ್ಯಯನದ ಹಿನ್ನೆಲೆಯಲ್ಲಿ ಗಮನಿಸಿದರೆ, – ಚಿತ್ ಶಕ್ತಿ ಎನ್ನುವದು ಸ್ತ್ರೀ ವಾಚಕ. ಈ ಚಿತ್–ಶಕ್ತಿಯಲ್ಲಿ ಉದಯಿಸುವದೇ ಚಿನ್ಮಯದ ಜ್ಯೋತಿ. ಇದು ಸ್ವಯಂಪೂರ್ಣ ಪ್ರಕಾಶದಿಂದ ಬೆಳಗುತ್ತಿದೆ. ಪರಿಪೂರ್ಣ ಚಿತ್ತಿನ ಹಂತವೂ ಇದೇ ಆಗಿದೆ. ಆಶ್ಚರ್ಯದ ಮಾತೆಂದರೆ ಆಗಲೂ ಸಹಿತ ಅದು ತನ್ನಲ್ಲಿ ತಾನು ನಾದಮಯವಾಗಿ (musing), ಸ್ಪಂದಿಸುತ್ತ ಇರುತ್ತದೆ. ಇದನ್ನು ಓಂ ಎಂದೋ, ಶಿವೋಹಂ ಎಂದೋ ಸೋಹಂ ಎಂದೋ ಬೇರೆಬೇರೆಯಾಗಿ ಕರೆದರೂ ಅವೆಲ್ಲವೂ ಬ್ರಹ್ಮಾಂಡ ನಾದಕ್ಕೆ ಸಮಸ್ಪಂದದಲ್ಲಿ ಮಿಡಿತಗೊಳ್ಳುತ್ತಿರುತ್ತದೆ. ಇದು ಈ ರೀತಿಯ ಸಮಸ್ಪಂದನ ಮೂಲಕವೇ ಪೂರ್ಣವಾಗಿ ಆ ಬ್ರಹ್ಮಾಂಡ ನಾದದಲ್ಲಿಯೇ ಸಂಲಗ್ನಗೊಂಡಾಗ ಅದಕ್ಕೆ "ಶಬ್ದಮುಗ್ಧ" ಸ್ಥಿತಿ ಎನ್ನುತ್ತಾರೆ. ಇದು ಶ್ರೀ ಅರವಿಂದರು ಹೇಳುತ್ತಿರುವ Absolute Silence.

ಮತ್ತೊಂದು ಆಶ್ಚರ್ಯದ ಸಂಗತಿ ಎಂದರೆ, ಆಧುನಿಕ ಮನಶ್ಶಾಸ್ತ್ರವೂ ಸಹಿತ, ಮಾನವನ ಜ್ಞಾನ–ಸಂಜ್ಞಾನ–ಪ್ರಜ್ಞಾನವೆನ್ನುವ ಹಂತದಲ್ಲಿ ರೂಪಾಂತರ–ಗೊಳ್ಳುವದನ್ನು ಅಧ್ಯಯನ ಮಾಡುತ್ತಿದೆ. ಈ ಮೂಲಕ ರೂಪಾಂತರಗೊಳ್ಳುತ್ತ, ಇದೆಲ್ಲವೂ ಮಾನವ ದೇಹದಲ್ಲಿರುವ ಮಿದುಳಿನ (ಪಾರಿಭಾಷಿಕ ವ್ಯಾಪ್ತಿಯಲ್ಲಿ ಸಹಸ್ರಾರ) ಮೂಲಕವೇ ಪರಿಪೂರ್ಣತೆಯತ್ತ ಸಾಗುತ್ತಿರುವ ಬಗೆಗೆ ಆವಿಷ್ಕಾರಗಳು ನಡೆದಿವೆ. ಆದರೆ ಕನ್ನಡ ಭಾಷಾ ಪ್ರಪಂಚದಲ್ಲಿ ಈ ವಿಷಯಗಳು ಇನ್ನೂ ಪ್ರವೇಶ ಪಡೆಯಲಿಲ್ಲ.

ಆದರೆ ಉಪನಿಷತ್ತುಗಳು, ಪೂರ್ವಜರ ಅವಧಿಯ ಮನೋವೈಜ್ಞಾನಿಕ ಅನುಭೂತಿಯಾಧಾರಿತ ಸಿದ್ಧಾಂತಗಳಾಗಿದ್ದರೆ, ಆಧುನಿಕ ಮನೋವಿಜ್ಞಾನದಲ್ಲಿ ಮನಸ್ಸೂ ಸಹಿತ ಖಭೌತ ಘಟನೆಯಲ್ಲಿರುವ ಘಟನಾವಳಿಗಳ ರೂಪಾಂತರ–ವೆನ್ನುವದನ್ನು ಮಂಡಿಸುತ್ತಿದೆ. ಶ್ರೀ ಅರವಿಂದರು ಇವೆರಡರ ಪರಿಪೂರ್ಣ ಸಂಗಮವನ್ನು 'ಸಾವಿತ್ರಿ'ಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

**ಆ ಪ್ರಾಣಶಕ್ತಿ ಉಪಮೆಗಾತೀತ ಅಗಣಿತದ ಋತದ ನಿಯತಿ**
**ಅವನ ಶೇಷವಿದು ಅವನದೇ ಏಕ ಅನಂತಾನಂತ ವ್ಯಾಪ್ತಿ,**

**ಸಾವಿರದ ಅವಳ ಕಾಲದಾಯಾಮದಲಿ ಅಮರ– ಜೀವವಿವನು**
**ಅದಿತಿಯವಕಾಶದಲ್ಲೀಗ ಅವಳ ಪಿಂಡ–ಬ್ರಹ್ಮಾಂಡವಾಗಿ ತಾನು.**

"ಋತ–ಸಂತ್ಯ–ಸತ್ಯ–ಗಾಯತ್ರೀ–ಸಾವಿತ್ರೀ–ಸರಸ್ವತಿ" ಇವು ಆರು ಚೈತನ್ಯದ ವಿಕಾಸದ ಸೂತ್ರಗಳು. ವೈಶ್ವಿಕ ಕಾಲಮಾನದ ಪ್ರಕಾರವಾಗಿಯೇ ಪರಿಪೂರ್ಣ–ಗೊಳ್ಳುವತ್ತ ಸದಾ ಯಾನವಿದೆ. ಭೂ ಬದುಕಿನ – ಆಯಾ ಕಾಲಮಾನದ (ಯುಗದ) ಅವಧಿಯಲ್ಲಿ ಒಂದೊಂದು ಆಯಾಮವನ್ನು ರೂಪಿಸಕೊಳ್ಳಬೇಕಾದುದು ನಿಯತಿ. ಅದೇ ರೀತಿಯಲ್ಲಿ ನಡೆಯುತ್ತಿದೆ.

ಪದಾರ್ಥ ಜ್ಞಾನದಿಂದ ಪದಜ್ಞಾನ, ಪದಜ್ಞಾನದಿಂದ ತತ್ತ್ವಜ್ಞಾನ, ತತ್ತ್ವಜ್ಞಾನದಿಂದ ಬ್ರಹ್ಮಜ್ಞಾನ ಎನ್ನುವದು ಅಧ್ಯಯನದ ಪರಂಪರೆ. ಬುದ್ಧನಾಗಲೀ ಅಥವಾ ಆದಿಶಂಕರರಾಗಲೀ ಪದಾರ್ಥ ಜ್ಞಾನ ಮತ್ತು ಪದಜ್ಞಾನದ ಸ್ವರೂಪದಲ್ಲಿಯೇ ಹೇಳಿದ್ದಾರೆ ಎಂದುಕೊಳ್ಳುವಾ. ಆ ರೀತಿಯ ಅಭಿವ್ಯಕ್ತಿಯು ವಿಕಸನದ ಆಯಾ ಹಂತದ ಆಯಾಮಗಳನ್ನು ಸೃಷ್ಟಿಸುತ್ತಲೇ ಬಂದಿದೆ. ಬ್ರಹ್ಮಾಂಡದ ಪ್ರತಿಯೊಂದು ಕಣವೂ (ಅಣುವೂ) ಸದಾ ಸ್ಪಂದನಶೀಲವೇ ಆಗಿದ್ದು, ಅದು ಅವಿರತವಾಗಿ ರೂಪಾಂತರಗೊಳ್ಳುತ್ತಲೇ ಇರುತ್ತದೆ. ಈ ಕ್ಷಣ ನಾವು ನೋಡಿದ (ಗಮನಿಸಿದ) ಕಣವು ಮುಂದಿನ ಕ್ಷಣದಲ್ಲಿ ಅದೇ ಸ್ವರೂಪದಲ್ಲಿ ಇರುವದೇ ಇಲ್ಲ. ಹಾಗಾದರೆ ನಾವು ನೋಡಿದ್ದು ಆ ಕ್ಷಣಕ್ಕೆ ಮಾತ್ರ "ಅಸ್ತಿತ್ವ"ದಲ್ಲಿ ಇದ್ದದ್ದು. ಅದರ ಕ್ಷಣಿಕತೆಯನ್ನು ಅವರಿಬ್ಬರೂ ಹೇಳುತ್ತಿದ್ದಾರೆ. ಭ್ರಾಂತಿ ಎನ್ನುವದು ತತ್–ಕ್ಷಣದಲ್ಲಿ ಕಂಡದ್ದನ್ನೇ ಚಿರಂತನವೆಂದು ಭಾವಿಸಬಾರದು ಎನ್ನುವದು ಅವರ ಇಚ್ಛೆಯಾಗಿದೆ. ಬುದ್ಧನ ಅವಧಿಯಲ್ಲಿ ಮತ್ತು ಶಂಕರರ ಅವಧಿಯಲ್ಲಿ ಪ್ರಚಲಿತವಿದ್ದ "ಭ್ರಾಂತಿ"ಯ ಅರ್ಥವ್ಯಾಪ್ತಿ ಕ್ರಮೇಣಕ್ರಮೇಣವಾಗಿ ಬೇರೆಯದೇ ಆಯಾಮದಲ್ಲಿ ರೂಪಣೆಯಾಗತೊಡಗಿತು. ಇಲ್ಲಿ ಅವರಿಬ್ಬರನ್ನೂ ವೈಭವೀಕರಿಸುವದಾಗಲಿ ಅಥವಾ ನಿರಾಕರಿಸುವದಾಗಲಿ ಎರಡೂ ಸಾಧ್ಯವಿಲ್ಲ. ವಿಕಾಸದ ಪಥದಲ್ಲಿ ಅವರವರಿಗೆ ಕಂಡ ಆಯಾಮಗಳನ್ನು – ಭವ ಬದುಕಿನ ಸೀಮಿತ ಅವಧಿಯಲ್ಲಿ ಅಭಿವ್ಯಕ್ತಿಗೊಳಿಸಿ – ಪಯಣಕ್ಕೆ ಪಥವೊಂದನ್ನು ನಿರ್ಮಿಸಿದ್ದಾರೆ. ಅವರೋಹಣದ ಪ್ರಕ್ರಿಯೆ ಸಂಪೂರ್ಣಗೊಂಡು, ಆರೋಹಣದ ಪ್ರಾರಂಭದ ಅವಧಿಯಲ್ಲಿ, ಭವಬದುಕಿನ ಮೂಲಕವೇ – ಅದರ ಅಸ್ತಿತ್ವದೊಡನೆ ಸಂವಹನಗೊಳ್ಳುತ್ತಲೇ, ಮಾನವನ ಬದುಕು ಊರ್ಧ್ವಗಾಮಿಯಾಗಬೇಕಾಗಿದೆ, ಅದರ ಆಯಾಮಗಳನ್ನು ಶ್ರೀ ಅರವಿಂದರು ಅಭಿವ್ಯಕ್ತಿಸಿದ್ದಾರೆ. ಶಂಕರ ಮತ್ತು

ಬುದ್ಧನ ಪರಿಕಲ್ಪನೆಗಳಲ್ಲಿಯೇ ಅನುಭಾವಗೊಂಡ ಚೇತನವು ಮತ್ತೂ ಮುಂದಕ್ಕೆ (ಊರ್ಧ್ವಗಾಮಿಯಾಗಿ) ಸಾಗಲು ಸಿದ್ಧವಾಗದಿದ್ದರೆ. ಅದು ಮಾಯೆಗೆ ಅಂಟಿಕೊಂಡಂತೆ ಆಗುತ್ತದೆ.

ಇಲ್ಲಿ ಶ್ರೀ ಅರವಿಂದರು ಅಭಿವ್ಯಕ್ತಿಸಿರುವ ದರ್ಶನದ ಹಂತದ ದೃಷ್ಟಾಂತಗಳನ್ನು ಪುನಃ ಸೃಷ್ಟಿಸಲು ಅಸಾಧ್ಯದವೆನ್ನುವ ಮಾತು ನಿಜ. ವಿಶ್ವ ಸತ್ಯಗಳ ಅಭಿವ್ಯಕ್ತಿ ಆಯಾ ವ್ಯಕ್ತಿಯ ಸಾಧನೆಗಳನ್ನು ಅವಲಂಬಿಸಿರುತ್ತದೆ. ತದನಂತರದಲ್ಲಿ ಅದನ್ನು 'ಅನುಸ್ಪಂದನ'ಗೊಳಿಸಿಕೊಳ್ಳುತ್ತಲೇ ಅವರು ನಿರ್ಮಿಸಿದ ಪಥದಲ್ಲಿ ಸಾಗಬೇಕಿದೆ.

ಇಲ್ಲಿ ಅವರು ನೀಡಿರುವ ಕಾವ್ಯಾತ್ಮಕ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿಯೇ ಗಮನಿಸಿದಲ್ಲಿ –

**ಅವಳ ಆ ಛಂದ–ಚಿತ್ತರಂಗ ತಾ ಪ್ರವರ್ತಕನಂತರಂಗ**
**ಅವನ ಸಂತೃಪ್ತಿ ಮತ್ತವನ ಅಳಲು –ವೇದನೆಗೆ ಈಗ ರಂಗ;**
**ಅವಳ ವೈಭವದ ವಿಶ್ವಕೃತುಬಲಕೆ ಅವನಿಗವ ಶರಣು ಮೊದಲು**
**ಪ್ರಳಯದ್ವಿಸ್ಫೋಟ ಉದಯದುತ್ಕ್ರಾಂತಿ ಅವಳಾಯ್ಕೆ ಏನೆ ಇರಲು**

**ಅವನ ಆಲೋಕದಲ್ಲವಳು ಗೈದ ಕಾರ್ಯಗಳು ಸರ್ವ ಕಾಲ**
**ಸರ್ವತ್ರವಾಗಿ ಅದ್ಭುತದ ಬೆಡಗು–ಜ್ಯೋತಿ–ಪುಂಜಗಳ ಜಾಲ;**
**ಅವಳಲ್ಲಿ ಅವನು ನಿರ್ಭರತೆಯಲ್ಲಿ, ಅರ್ಣವದಿ ತರಣ–ಪಟುವು**
**ಅವಳ ಆ ಲೋಕ–ಹರ್ಷದೆಡೆ ಅವನು ಹವ್ಯಾಸಿ ಅರಿಯ ದಣಿವು.**

ನಮ್ಮ ಸಂವೇದ ಸ್ಥಿತಿಗೆ ಯಾವುದೇ ಕ್ಲೇಶಗಳು ಬಂದರೂ, ಅದೇ ಮುಂದುವರೆದರೂ ಸಹಿತ, ಪರಿಪೂರ್ಣತೆಯ ಕಡೆಗೆ ಅವಳು ಕೈಹಿಡಿದು ಹಿತ ಸ್ಪರ್ಶದೊಂದಿಗೇ ನಡೆಸುತ್ತಾಳೆ. ಅವನು ಅದನ್ನು ಮುದದಿ ಅನುಭಾವದಲ್ಲಿ ತಲ್ಲೀನನಾಗಿ ತನ್ನ ಚಿತ್ತವನ್ನು ಮಧುಮಧುರಗೊಳಿಸಿಕೊಂಡಲ್ಲಿ, ಆಗ ಸರ್ವಾನುಭೂತಿಯಲ್ಲಿಯೂ ಸಹಿತ ಅವಳದೇ ವರದ–ಹಸ್ತವಿರುತ್ತದೆ.

ಇಲ್ಲಿ ಪ್ರಕೃತಿ ಮತ್ತು ಪುರುಷರ ಅವಿನಾಭಾವದ ಸ್ವರೂಪವನ್ನು ಮತ್ತು ನಿರಾಕಾರದಿಂದ ಸಾಕಾರಗೊಳ್ಳುವ ಒಂದೇ 'ತತ್ತ್ವದ' ಆಯಾಮಗಳ ಹಿನ್ನೆಲೆಯಲ್ಲಿ, ನೋಡಿದರೆ, ಇಲ್ಲಿರುವ 'ವಿಭವ ಶಕ್ತಿ ಮತ್ತು ಚಲನ ಶಕ್ತಿ'ಗಳ ಮೂಲಕ ವಿಶ್ವ ಹೇಗೆ ಸಾರೂಪ್ಯಗೊಳ್ಳುತ್ತದೆ ಎನ್ನುವದನ್ನು ತುಂಬ ಕಾವ್ಯಾತ್ಮಕವಾದ ಹಿನ್ನೆಲೆಯಲ್ಲಿ 'ಸಾವಿತ್ರಿ' ಸಂಕೇತಿಸುತ್ತದೆ.

ಇನ್ನು ಈ ವಿಭವ ಶಕ್ತಿ ಎಂದರೆ ಕಾಯ ಅಥವಾ ವ್ಯವಸ್ಥೆಯೊಂದು ತನ್ನ ಸ್ಥಾನ/ವಿನ್ಯಾಸದಿಂದ ಗಳಿಸಿಕೊಂಡಿರುವ ಶಕ್ತಿ. ಈ ವಿಭವ ಶಕ್ತಿಯನ್ನು ಭೌತಶಾಸ್ತ್ರದ ಅಧ್ಯಯನದಲ್ಲಿ Potential ಅಂದರೆ ಕ್ಷೇತ್ರಗಳ ಒಂದು ಗುಣವನ್ನಾಗಿ ಗುರುತಿಸಲಾಗುತ್ತದೆ. ಯಾವುದೇ ರಾಶಿಯ ಸುತ್ತಲಿನ ಒಂದು ಬಿಂದುವಿನಲ್ಲಿ ಏಕಮಾನ ರಾಶಿಯ ವಿಭವ ಶಕ್ತಿಯೇ ಆ ಬಿಂದುವಿನ ಗುರುತ್ವ ವಿಭವವೂ ಆಗಿರುತ್ತದೆ. ಇನ್ನು ಅನಂತಾನಂತದಲ್ಲಿ ವಿಭವ ಶಕ್ತಿ ಶೂನ್ಯ ಎಂದು ಭಾವಿಸದರೆ ವಿಭವವೂ ಶೂನ್ಯವಾಗುತ್ತದೆ. ಇದನ್ನು ಗಣಿತ ವಿಧಾನದಲ್ಲಿ ಪುರಾವಿಸಲೂ ಬರುತ್ತದೆ.

ಅದೇ ರೀತಿಯಲ್ಲಿ “ಚಲನ ಶಕ್ತಿ” (Kenitic energy)ಯು ಸಹಿತ ಚಲನೆಯಿಂದ ಮಾತ್ರ ಉದ್ಭವಿಸುವ ಶಕ್ತಿಯಾಗಿರುತ್ತದೆ. ಆದರೆ ಈ ರೀತಿ ಚಲನಶೀಲತೆ ಬರಬೇಕು ಎಂದರೆ ಅದಕ್ಕೆ ಬಾಹ್ಯ ಬಲ ಪ್ರಯೋಗವಾಗಲೇಬೇಕು. ಕಾಲಕ್ಕೆ ಸಂಬಂಧಿಸಿದಂತೆ ಕಾಯವೊಂದರ ಸ್ಥಾನದ ನಿರಂತರ ಬದಲಾವಣೆ ಈ ಚಲನೆಯಾಗಿದೆ. ಇಲ್ಲಿ ‘ಅವಳು’ ಬಾಹ್ಯ ಶಕ್ತಿಯನ್ನು ಒದಗಿಸುವ – ಅದರಲ್ಲೂ ಅವಳದೇ ಆತ್ಮದಭೀಪ್ಸೆಯಾಗಿರುವ – ಸಲುವಾಗಿ ‘ಅವನಿಗೆ’ ‘ಚಲನ ಶಕ್ತಿಯ’ನ್ನು ರೂಪಿಸಿ ಸೃಷ್ಟಿಗೆ–ವಿಕಸನಕ್ಕೆ–ಪರಿವರ್ತನಕ್ಕೆ–ರೂಪಾಂತರಕ್ಕೆ ಕಾರಣವಾಗುತ್ತಾಳೆ. ಒಂದು ವೇಳೆ ‘ಚಲನ ಶಕ್ತಿಯು’(ಅವನು) ತನಗೆ ತಾನೇ ಸ್ವತಂತ್ರನೆಂದು ಭಾವಿಸಿದರೆ, ಅದಕ್ಕೆ ತಕ್ಕ ಶಾಸ್ತಿಯನ್ನೂ ‘ಅವಳು’ ಮಾಡುತ್ತಾಳೆ.

ಈ ವಿಷಯದಲ್ಲಿ ಶ್ರೀ ಅರವಿಂದರು ನೀಡಿರುವ ಅಗಾಧ ವ್ಯಾಪ್ತಿಯ ವಿಷಯಗಳಿಗೆ ಅವುಗಳದೇ ಆದ ಪರಿಭಾಷೆ ಬೇಕು ಎನಿಸುತ್ತದೆ. ಅದು ಆಧ್ಯಾತ್ಮಿಕ ಹಿನ್ನೆಲೆಯಲ್ಲಿಯೋ ಅಥವಾ ಕಾವ್ಯಾತ್ಮಕ ಪ್ರತಿಮೆಯಲ್ಲಿಯೋ ಇದೆ ಎಂದಾದಲ್ಲಿ, ಅದರ ಬಗೆಗೆ ಇನ್ನೂ ವಿವರವಾದ ವಿಶ್ಲೇಷಣೆ ಬೇಕು ಅನಿಸುತ್ತದೆ.

ಕ್ರಿಯಾ ಪದಗಳು ಇದ್ದರೇ ಮಾತ್ರ ವಾಕ್ಯದ ಅರ್ಥ ಪರಿಪೂರ್ಣ ಎನ್ನುವದು ನಮ್ಮ ದೇಶಕ್ಕೆ ಆಮದುಗೊಂಡಿರುವ ವಿಷಯ. ಪ್ರಾಯಃ, ಪ್ರಾಥಮಿಕ ಶಾಲೆಯ ಒಂದನೇ ವರ್ಗದಲ್ಲಿ ‘ಇವನು ಬಸವ, ಇವಳು ಕಮಲ, ಇದು ಬಸವನ ಮನೆ – ಇತ್ಯಾದಿ ಪಾಠಗಳಲ್ಲಿ ಎಲ್ಲಿಯೂ ಕ್ರಿಯಾ ಪದಗಳ ಉಲ್ಲೇಖವೇ ಇರಲಿಲ್ಲ. ಪ್ರಾಥಮಿಕ ಹಂತದಲ್ಲಿ ಕ್ರಿಯಾ ಪದಗಳನ್ನು ಕಲಿಸದೇ ಇರುವದಕ್ಕೂ ಒಂದು ಕಾರಣವಿದೆ. ಕ್ರಿಯಾ ಪದಗಳು ನಮ್ಮನ್ನು ಕಾಲಕ್ಕೆ ಕಟ್ಟಿಹಾಕುತ್ತವೆ.

ಕ್ರಿಯಾ ಪದವು ಯಾವಾಗಲೂ ತನ್ನನ್ನು ನಿಗದಿತ ಕಾಲಕ್ಕೆ ಸೀಮಿತಗೊಳಿಸಿ–ಕೊಳ್ಳುತ್ತದೆ. ಪೂರ್ಣ ವಿರಾಮವನ್ನು ಬಯಸುತ್ತದೆ. ಆಶ್ಚರ್ಯದ ಮಾತೆಂದರೆ ಇಡೀ ಭಾರತದ ಯಾವುದೇ ಭಾಷೆಯಲ್ಲಿಯೂ 1900ರ ವರೆಗೂ ಚಿಹ್ನೆಗಳೇ – ಈಗ ನಾವು ಬಳಸುತ್ತಿರುವ ಅಲ್ಪವಿರಾಮ, ಪೂರ್ಣವಿರಾಮ, ಆವರಣ ಚಿಹ್ನೆ, ಉದ್ಗಾರವಾಚಕ ಚಿಹ್ನೆ ಇತ್ಯಾದಿ ಇರಲೇ ಇಲ್ಲ, ಪ್ರಾಚೀನ ಇಂಗ್ಲೀಷ ಭಾಷೆಯಲ್ಲೂ ಇಲ್ಲ. ಆದರೆ ಯಾವಾಗ ಈ ಚಿಹ್ನೆಗಳು ಅಭಿವ್ಯಕ್ತಿಯಲ್ಲಿ ಪ್ರವೇಶ ಮಾಡಿಕೊಂಡವೋ, ಆಗಿನಿಂದ ಮಾನವನ ಕಲ್ಪಕ ಶಕ್ತಿ ಕುಂಠಿತವಾಗತೊಡಗಿತು. ಕಾಲಾತೀತವಾದ ವಿಷಯವು ತರ್ಕಾತೀತವಾಗಿರುತ್ತದೆ. ಅಲ್ಲಿ ಯಾವುದೇ ಕಾಲದ ಬಂಧವೂ ಇರುವದಿಲ್ಲ, ಬಂಧನವೂ ಇರುವದಿಲ್ಲ. ಇದು ಕಾವ್ಯದ ಪ್ರಥಮ ಗುಣಲಕ್ಷಣವೂ ಹೌದು, ಕ್ರಿಯಾ ಪದಕ್ಕೆ ಅಂಟಿಕೊಂಡೇ ಅಭಿವ್ಯಕ್ತಗೊಂಡ ಬಹುತೇಕ ಉದಾಹರಣೆಗಳು ಗದ್ಯದ ಸ್ವರೂಪದಲ್ಲಿರುತ್ತವೆ. ಒಂದು ಸಮರ್ಥ ಕಾವ್ಯ ಕಾಲಾತೀತವಾದುದು ಎಂದರೆ ಅಲ್ಲಿ ನಿರ್ಬಂಧನ ವಿಧಿಸುವ ಕ್ರಿಯಾಪದದ ಅವಶ್ಯಕತೆ ಇರುವದಿಲ್ಲ. ಭಾಷೆ ಯಾಕೆ ಈ ರೀತಿ ವಿಚಲನೆಯಾಗಿ, ಮಾನವನ ಚಿಂತನಾ ಶಕ್ತಿಯನ್ನು, ವೈಶ್ವಿಕ ಆಯಾಮವನ್ನು, ಕಾಲಾತೀತವಾಗುವ ಶಬ್ದಗಳ ಸ್ವರೂಪವನ್ನು ಹುದುಗಿಸಿಬಿಟ್ಟಿದೆ. ಅದು ಯಾವಾಗಿನಿಂದ ಈ ರೀತಿ ಆಯಿತು ಎನ್ನುವದನ್ನು ಶ್ರೀ ಅರವಿಂದರು ತುಂಬ ವಿವರವಾಗಿಯೇ ಚಿತ್ರಿಸಿದ್ದಾರೆ.

ಮತ್ತೊಂದು ಸಾಂಸ್ಕೃತಿಕ ನೆಲೆಯಿಂದ, ಆ ಭಾಷೆಯಿಂದ ಇನ್ನೊಂದು ಸಾಂಸ್ಕೃತಿಕ ನೆಲೆಗೆ ಮತ್ತು ಭಾಷೆಗೆ ಬರುವದು ಅನುವಾದ. ಆದರೆ ಒಂದೇ ಸಾಂಸ್ಕೃತಿಕ ನೆಲೆಯಲ್ಲಿ ರೂಪಿತಗೊಂಡ ಅಭಿವ್ಯಕ್ತಿ ಅದೇ ಸಾಂಸ್ಕೃತಿಕ ನೆಲೆಯ ಇನ್ನೊಂದು ಭಾಷಾ ಸ್ವರೂಪಕ್ಕೆ ಬರುವದು ಅನುಸ್ಪಂದನವಾಗುತ್ತದೆ. ಸಾವಿತ್ರಿಯಾಗಲೀ ಅಥವಾ ವೇದ ರಹಸ್ಯವಾಗಲೀ, ಭಾರತದ ಯಾವುದೆ ಭಾಷೆಯಲ್ಲಿ ಬಂದರೂ ಅದು ಅನುಸ್ಪಂದನ. ಏಕೆಂದರೆ ಅದರ ವಸ್ತು–ವಿಷಯ–ಆಯಾಮ ಇಡೀ ಭಾರತದ ಚಿಂತನಾ ವಲಯ ಈಗಾಗಲೇ ಅದೇ ಆಧಾರದಲ್ಲಿಯೇ ರೂಪುಗೊಂಡಿದೆ, ಗೊತ್ತಿದೆ.

ಸೈದ್ಧಾಂತಿಕ ನೆಲೆಯ ಪರಿಭಾಷೆಯ ಆಯಾಮದಲ್ಲಿ ದೇಹದ ಮೂಲಕ ಅಥವಾ ಮನಸ್ಸಿನ ಮೂಲಕ ಅನುಭವ, ಚಿತ್ತದ ಮೂಲಕ ಅನುಭಾವ ಹಾಗೂ ಆತ್ಮದ ಮೂಲಕ ಅನುಭೂತಿ ಎನ್ನುವ ಪರಂಪರೆ ಇದೆ. ಅದಕ್ಕೇ ಆತ್ಮಾನುಭೂತಿ ಎಂದಿದೆ. ಲೌಕಿಕಾನುಭವವಿದೆ. ಚೇತನಾನುಭಾವವೂ ಇದೆ. ಅದಕ್ಕಿಂತ ಮಿಗಿಲಾಗಿ,

ಒಂದು ಪ್ರತಿಮಾತ್ಮಕ ಕಾವ್ಯವು (ಇಲ್ಲಿ ಸಾವಿತ್ರಿಯು) ಯಾವಾಗಲೂ ಯೌಗಿಕ ಚೈತನ್ಯದಿಂದಲೇ ರೂಪಿತಗೊಳ್ಳುತ್ತದೆ. ಇದು ನಿಸರ್ಗ ಸಹಜವಾಗಿರುವ ಅಭಿವ್ಯಕ್ತಿಯೂ ಆಗಿದೆ. ಹೀಗಾಗಿ ಇಲ್ಲಿ 'ಪ್ರತಿಮೆ' ಎಂದರೆ ಪ್ರಕೃತಿ. ಅದೇ ರೀತಿ ಮೂರ್ತಿ ಅಥವಾ ಶಿಲ್ಪ ಎನ್ನುವದು ಸಂಸ್ಕೃತಿಯಾಗುತ್ತದೆ. ಪ್ರತಿಮಾತ್ಮಕ ಕಾವ್ಯವು ಯಾವಾಗಲೂ ಭವಿಷ್ಯವನ್ನು ಸಶಕ್ತಗೊಳಿಸುವ ದಿಸೆಯತ್ತಲೇ ತುಡಿತ ಹೊಂದಿರುತ್ತದೆ. ಹೀಗಾಗಿ ಅದನ್ನೇ ಧ್ಯಾನಿಸುತ್ತ ಇರುತ್ತದೆ. ಅದು ವರ್ತಮಾನದೊಂದಿಗೆ ಸ್ಪಂದಿಸುತ್ತಲೇ, ಶಾಶ್ವತ ಸತ್ಯದ ಕಡೆಗೆ ಪಥ ನಿರ್ಮಿಸುವಲ್ಲಿ ಮಾರ್ಗದರ್ಶನ ನೀಡುತ್ತದೆ. ಶಾಶ್ವತ ಸತ್ಯಗಳು ಯಾವಾಗಲೂ ವೈಶ್ವಿಕ ಆಯಾಮದಲ್ಲಿಯೇ ಇರುತ್ತವೆ.

ಹೀಗೆ ಶ್ರೀ ಅರವಿಂದರ ಭಾಷಾ ವಿಶೇಷತೆಯ ಬಗೆಗೆ, ಅದರಲ್ಲಿರುವ ಈ ಕಾಲಾತೀತವಾಗಿರುವ ಶಬ್ದಗಳ ಬಗೆಗೆ ಖಂಡಿತ ಅಧ್ಯಯನ ಬೇಕಾಗಿದೆ. ಮನುಕುಲದ ಮುಂದೆ ಇರುವ ಈ ಆಧುನಿಕ ಕಾಲದ 'ಮಂತ್ರದ ಅಂತರಾರ್ಥದೊಂದಿಗೆ ಸ್ಪಂದನದ ಸಾಧ್ಯತೆಯು', ಇಂದಿಗೂ ಸವಾಲಾಗಿಯೇ ಮುಂದುವರೆಯುತ್ತದೆಯೇ?

ಅವಳ ಚಿಜ್ಜ್ಯೋತಿ ಕಾಂತಿಪುಂಜಗಳ ಅಕ್ಷರದ ಆತ್ಮದಲ್ಲಿ
ಅವಳಾತ್ಮ ಮೆಚ್ಚಿ ಅವಳಿಚ್ಛೆಯಂತೆ ಅನುವಾದಗೊಂಡಿತಿಲ್ಲಿ,
ಆ ದಿವ್ಯ ಪರಮ ದೇವನಾ ಶುದ್ಧ ಪರಿಶುದ್ಧ ಪಠ್ಯವನ್ನು
ಭವ ಬದುಕಿನಲ್ಲಿ ದಿವ ಭಾವವನ್ನು ತುಂಬಲೆನೆ ಸತತವಿನ್ನು

ಘನದ ಅಚ್ಚರಿಯ ಚಿದ್ಘನದ ತೋಷದೀ ವಿಶ್ವಗ್ರಂಥವನ್ನು
ಸಂಭ್ರಮದ ತೋಷದಲಿ ಪಠಿಸಲಿದನು ಚಿಂತನದಿ ತೊಡಗಿ ಅವನು,
ಅನಿರ್ವಚನೀಯ ಅಜ್ಞಾತದೆದೆಯ ಸೌಂದರ್ಯ– ಸಾರ–ಭೂತ
ಅದರಾತ್ಮ ಮಿಡಿತಕಿದೆ ಸಹಜ–ಸೂತ್ರ, ಇದು ದತ್ತ ನಿತ್ಯ–ಚೇತ

**– ಪುಟ್ಟು ಕುಲಕರ್ಣಿ**

**ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 193**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

## ಶ್ರೀ ಅರವಿಂದ ಸೊಸೈಟಿ ಕೇಂದ್ರ, ಚಿತ್ರದುರ್ಗ

**ಶ್ರೀ ಅರವಿಂದರ 150ನೇ ಜನ್ಮ ಜಯಂತಿಯ ಅಂಗವಾಗಿ ಶ್ರೀ ಅರವಿಂದ ಸೊಸೈಟಿ, ಚಿತ್ರದುರ್ಗ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದ ವಿವರಗಳು:**

ದಿನಾಂಕ 28/08/2022 ರಂದು ಶ್ರೀ ಅರವಿಂದೋ ಅಧ್ಯಯನ ಕೇಂದ್ರದಿಂದ ಆಗಮಿಸಿದ ಒರಿಸ್ಸಾದ ಗುರುಬಂಧುಗಳಿಂದ ಅಧ್ಯಯನ ಕೇಂದ್ರದ ಪರಿಚಯ ಮತ್ತು ಶ್ರೀ ಅರವಿಂದರ ಪೂರ್ಣಯೋಗದ ಕುರಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 29/08/2022 ರಂದು ಚಿತ್ರದುರ್ಗ ನಗರದ ಪ್ರಖ್ಯಾತ SRS ಶಾಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶ್ರೀ ಅರವಿಂದರ ಜೀವನ, ತತ್ತ್ವ, ಆದರ್ಶ ಮತ್ತು ಬೋಧನೆಗಳ ಬಗ್ಗೆ ತಿಳುವಳಿಕೆ ಮೂಡಿಸಲಾಯಿತು.


ದಿನಾಂಕ 24/09/2022 ರಂದು ಶ್ರೀ ಅರವಿಂದರ 150ನೇ ಜನ್ಮ ಜಯಂತಿಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶ್ರೀ ರ.ವಿ. ಜಹಾಗೀರದಾರ ಮತ್ತು ಶ್ರೀ ನಂದನ ಪ್ರಭುರವರು ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದರು.

ಶ್ರೀ ಅರವಿಂದರ ಜೀವನ, ಸಾಧನೆ ಮತ್ತು ಪೂರ್ಣಯೋಗದ ಕುರಿತು ಶ್ರೀ ರ.ವಿ. ಜಹಾಗೀರದಾರ ರವರು ಉಪನ್ಯಾಸ ನೀಡಿದರು ಮತ್ತು ಶ್ರೀ ನಂದನ ಪ್ರಭುರವರು ಶ್ರೀ ಅರವಿಂದರ ರಾಷ್ಟ್ರೀಯತೆ ಮತ್ತು ಇಂದಿನ ಕಾಲಮಾನಕ್ಕೆ ಮತ್ತು ಯುವ ಪೀಳಿಗೆಗೆ ಶ್ರೀ ಅರವಿಂದರ ತತ್ವದ ಔಚಿತ್ಯವನ್ನು ಉಪನ್ಯಾಸದಲ್ಲಿ ಬಹಳ ಸೊಗಸಾಗಿ ವಿವರಿಸಿದರು.

## ಶ್ರೀ ಅರವಿಂದ ಸೊಸೈಟಿ ಕೇಂದ್ರ, ದಾಂಡೇಲಿ

ಶ್ರೀ ಅರವಿಂದೋ ಸೊಸೈಟಿ ಕೇಂದ್ರ, ದಾಂಡೇಲಿ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಜಂಟಿಯಾಗಿ ಹಮ್ಮಿಕೊಂಡಿದ್ದ ಮಹರ್ಷಿ ಶ್ರೀ ಅರವಿಂದರ 150ನೇ ಜನ್ಮ ದಿನಾಚರಣೆ ಅಂಗವಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಆಯೋಜಿಸಿದ ಪ್ರಬಂಧ ಮತ್ತು ಭಾಷಣೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಹಿರಿಯ ಸಾಧಕರಾದ ಡಾ॥ ಆರ್.ಎಸ್. ಗಾಂವ್ಕರ್‌ರವರು ಶ್ರೀ ಅರವಿಂದರ ಜೀವನ ತತ್ವ ಹಾಗೂ ಬೋಧನೆಗಳ ಕುರಿತು ಬಹಳ ಅರ್ಥಪೂರ್ಣವಾಗಿ ಉಪನ್ಯಾಸ ನೀಡಿದರು. ಶ್ರೀ ಅರವಿಂದೋ ಸೊಸೈಟಿ ಕೇಂದ್ರ ಅಧ್ಯಕ್ಷರಾದ ಸಂತೋಷ ಅಣ್ವೇಕರರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದರು. ಮುಖ್ಯ ಅತಿಥಿಗಳಾಗಿ ನಗರ ಸಭಾ ಅಧ್ಯಕ್ಷೆ ಶ್ರೀಮತಿ ಸರಸ್ವತಿ ರಜಪೂತ, ಕಾಗದ ಕಾರ್ಖಾನೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಶ್ರೀ ಕೆ.ಜಿ. ಗಿರಿರಾಜ ಆಗಮಿಸಿದರು. ಗೌರವ ಅತಿಥಿಗಳಾಗಿ ಶ್ರೀ ಎ.ಬಿ. ದೇಸಾಯಿ, ಅಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ ಶಾಖೆ, ಧಾರವಾಡ, ರಾಜ್ಯ ಶ್ರೀ ಅರವಿಂದೋ ಸೊಸೈಟಿ ಸಂಯೋಜಕ ಡಾ॥ ಜಗದೀಶ್, ಕಾರ್ಯದರ್ಶಿ ಡಾ॥ ಎಸ್.ಕೆ. ಕೊಪ್ಪ ಹಾಗೂ ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಘಟಕದ ಅಧ್ಯಕ್ಷ ಶ್ರೀ ನಾರಾಯಣ ನಾಯ್ಕ ಮತ್ತು ಶ್ರೀ ದೀಪಕ್ ಡಿಸೋಜ ಆಗಮಿಸಿದ್ದರು. ಹಿರಿಯ ವೈದ್ಯ ಡಾ॥ ಎನ್.ಜಿ. ಬ್ಯಾಕೋಡ, ಮಹರ್ಷಿ ಶ್ರೀ ಅರವಿಂದರ ಕುರಿತು ಉಪನ್ಯಾಸ ನೀಡಿದರು. ಶ್ರೀ ಅರವಿಂದೋ ಸೊಸೈಟಿ ಕೇಂದ್ರ ದಾಂಡೇಲಿ ಕಾರ್ಯದರ್ಶಿ ಶ್ರೀ ಸಂದೀಪ್ ಗಾಂವ್ಕರ್ ಮತ್ತು ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಲು ಎಲ್ಲಾ ರೀತಿಯ ಸಹಕಾರ ನೀಡಿದರು. ಶ್ರೀ ನಾಗೇಶ ಆರ್. ನಾಯ್ಕರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.



ಫೋಟೋ: ಇಮೇಜಿಂಗ್ ಸಾವಿತ್ರಿ

ಮಿನುಮಿನುಗು ತಾರೆಗಳ ವಿಶ್ವಗೀತೆಯಾ ಗಾನ ಆಲಿಸುತ್ತ
ತಮವದುವು ಈಗ ಅರಳಲೆನೆ ಬೇಗ ಜಾಗರಿಸಿಕೊಂಡಿತಿತ್ತ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 55)**

**RNI No. 22511/1971**
No. of Pages **44 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ಅವಳಿಚ್ಛೆಗೊಂಡು ಚಿತ್ರಿಸಿದ ರೂಹು ಸಾಕಾರಗೊಳುವ ತೆರದಿ
ಅವನ ಭಾವಗಳು ಪಡಿಮೂಡಿಕೊಂಡು, ಅವನ ಕಾರ್ಯಗಳ ಸರದಿ,

– **ಪುಟ್ಟು ಕುಲಕರ್ಣಿ**

(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 4 ಪುಟ 63)

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.